# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ




**"ನನಗೆ ಮಗ ಇಲ್ಲ ಎನ್ನುವುದರ ಬಗ್ಗೆ ಚಿಂತೆ ಇಲ್ಲ, ಇರುವ ಒಬ್ಬಳೇ ಮಗಳು ದೊಡ್ಡವಳಾದ ಮೇಲೆ ಭಾರತೀಯ ಸೇನೆಗೆ ಸೇರಬೇಕು ಎಂಬ ಮಹದಾಸೆ ಇದೆ"**

ಸಿಯಾಚಿನ್‌ನಲ್ಲಿ ಹಿಮದಡಿ ಸಿಲುಕಿ 6 ದಿನಗಳ ಕಾಲ ಬದುಕಿ ಉಳಿದು ನಂತರ ಆಸ್ಪತ್ರೆಯಲ್ಲಿ ಮೃತಪಟ್ಟ ವೀರಯೋಧ ಹನುಮಂತಪ್ಪ ಕೊಪ್ಪದ ಅವರ ಧರ್ಮಪತ್ನಿ ಮಹಾದೇವಿ


ಸಂಪುಟ : 37   ಸಂಚಿಕೆ : 15   ಮನ್ಮಥ–ಮೀನ   ಕಲಿಯುಗಾಬ್ದ 5117   15–3–2016   ತ್ರೈವಾರ್ಷಿಕ : ರೂ. 150.00   ಬಿಡಿ ಪ್ರತಿ : ರೂ. 3.00   ಪುಟಗಳು : 4


# ನೀನ್ಯಾರಿಗಾದೆಯೋ ಎಲೆ ಮಾನವ!

**ವೈದ್ಯ ವಿಜ್ಞಾನದ ಹೊಸ ಹೊಸ ಆವಿಷ್ಕಾರಗಳು ಜೀವ ಉಳಿಸುವ ಅನೇಕ ಸಾಧ್ಯತೆಗಳನ್ನು ನಮ್ಮ ಮುಂದೆ ತೆರೆದಿಟ್ಟಿವೆ. ಕೆಲವು ವರ್ಷಗಳ ಹಿಂದೆ ವೈದ್ಯಕೀಯ ಜಗತ್ತಿನ ವಿಸ್ಮಯಗಳೆಂದು ಮಾಧ್ಯಮಗಳಲ್ಲಿ ವರದಿಯಾಗುತ್ತಿದ್ದ ಅಂಗಾಂಗ ಕಸಿ ಇಂದು ಸಾಮಾನ್ಯವಾಗಿದೆ. ಎಲ್ಲಿಯವರೆಗೆ ಎಂದರೆ ಮಿದುಳಿನ ಕಸಿಯ ಕುರಿತಂತೆಯೂ ಸಾಕಷ್ಟು ಪ್ರಯತ್ನಗಳು ನಡೆಯುತ್ತಿವೆ. ಆದರೆ ಮನುಷ್ಯ ದೇಹದ ಭಾಗಗಳನ್ನು ಕೃತಕವಾಗಿ ತಯಾರಿಸಲು ಸಾಧ್ಯವಿಲ್ಲ. ಈ ಕುರಿತ ಬಹುತೇಕ ಸಂಶೋಧನೆಗಳು ಯಶಸ್ಸನ್ನು ಕಂಡಿಲ್ಲ. ಅಂಗಾಂಗ ಕಸಿಯಿಂದ ಅನೇಕ ಜೀವಗಳನ್ನು ಉಳಿಸಲು ಬೇಕಾದ ವ್ಯವಸ್ಥೆ ನಮ್ಮಲ್ಲಿ ಬೆಳೆದಿದೆ, ಅಗತ್ಯವಿರುವ ದೊಡ್ಡ ಸಂಖ್ಯೆಯ ರೋಗಿಗಳೂ ಇದ್ದಾರೆ. ದಾನ ಮಾಡುವವರು ಬೇಕಷ್ಟೇ. ಈ ಹಿನ್ನೆಲೆಯಲ್ಲಿ ಪರರಿಗೆ ಜೀವದಾನ ಮಾಡಬಲ್ಲ ರಕ್ತದಾನ, ನೇತ್ರದಾನ, ಅಂಗಾಂಗ ದಾನ ಹಾಗೂ ದೇಹದಾನಗಳೆಂದರೇನು? ಇವುಗಳ ಮಹತ್ವವೇನು? ಯಾರು, ಎಲ್ಲಿ ಮತ್ತು ಹೇಗೆ ಈ ದಾನಗಳನ್ನು ಮಾಡಬಹುದು ಎನ್ನುವುದರ ಬಗ್ಗೆ ಒಂದಿಷ್ಟು ಮಾಹಿತಿ ಪಡೆಯೋಣ.**

## ರಕ್ತದಾನ

ರಕ್ತದ ಮಹತ್ವವನ್ನು ವರ್ಣಿಸುವಾಗ "ರಕ್ತಂ ಜೀವ ಇತಿ ಸ್ಥಿತಿಃ" ಎನ್ನಲಾಗಿದೆ, ಅಂದರೆ ರಕ್ತವನ್ನು ಜೀವ ಎಂದು ಕರೆಯಲಾಗಿದೆ. ಒಬ್ಬ ಆರೋಗ್ಯವಂತ ವ್ಯಕ್ತಿಯ ದೇಹದಲ್ಲಿ ಸುಮಾರು 5–6 ಲೀಟರ್‌ಗಳಷ್ಟು ರಕ್ತವಿರುತ್ತದೆ. ದೇಹದ ತೂಕದ ಸುಮಾರು 7 ಪ್ರತಿಶತ ತೂಕ ರಕ್ತದ್ದಾಗಿರುತ್ತದೆ. ಒಮ್ಮೆ ರಕ್ತದಾನ ಮಾಡುವಾಗ ಸಾಮಾನ್ಯವಾಗಿ ಒಂದು ಯುನಿಟ್ ಅಂದರೆ 350 ಮಿಲಿ ಲೀಟರ್‌ಗಳಷ್ಟು ರಕ್ತವನ್ನು ಮಾತ್ರ ತೆಗೆಯಲಾಗುತ್ತದೆ. ಇದರಿಂದ ಯಾವುದೇ ರೀತಿಯ ಹಾನಿಯೂ ಆಗುವುದಿಲ್ಲ. ಜೊತೆಗೆ ಕೇವಲ ಪ್ಲೇಟ್‌ಲೆಟ್‌ಗಳನ್ನು ತೆಗೆದು ಉಳಿದ ರಕ್ತವನ್ನು ದೇಹಕ್ಕೆ ಮರುಪೂರಣ ಮಾಡಬಲ್ಲ ಯಂತ್ರಗಳೂ ತಯಾರಾಗಿವೆ.

ನಮ್ಮ ದೇಶದಲ್ಲಿ ಒಂದು ವರ್ಷಕ್ಕೆ ಸುಮಾರು 4 ಕೋಟಿ ಯುನಿಟ್‌ಗಳಷ್ಟು ರಕ್ತದ ಬೇಡಿಕೆ ಇದೆ. ಆದರೆ ದೊರೆಯುತ್ತಿರುವುದು ಕೇವಲ 40 ಲಕ್ಷ ಯುನಿಟ್‌ಗಳು ಮಾತ್ರ ಎಂಬುದು ವಿಷಾದನೀಯ. ಪ್ರತಿ ದಿನ 38,000 ಕ್ಕೂ ಹೆಚ್ಚು ರಕ್ತದಾನಿಗಳ ಆವಶ್ಯಕತೆಯಿದೆ. ಕರ್ನಾಟಕ ರಾಜ್ಯವೊಂದರಲ್ಲೇ ದಿನಕ್ಕೆ ಸುಮಾರು 900 ರಿಂದ 1200 ಯುನಿಟ್‌ಗಳಷ್ಟು ರಕ್ತದ ಆವಶ್ಯಕತೆಯಿದೆ. ರಕ್ತದ ಆವಶ್ಯಕತೆ ಬರಬಹುದಾದ ಕೆಲವು ಸಂದರ್ಭಗಳೆಂದರೆ,

- ಅಪಘಾತಗಳಲ್ಲಿ ಗಾಯಗೊಂಡು ಹೆಚ್ಚಿನ ರಕ್ತಸ್ರಾವವಾದಾಗ
- ಹೆರಿಗೆ ಸಂದರ್ಭದಲ್ಲಿ ವಿಪರೀತ ರಕ್ತಸ್ರಾವವಾಗಿ ರಕ್ತದ ಒತ್ತಡ ಕಡಿಮೆಯಾಗಿದ್ದಲ್ಲಿ
- ರಕ್ತದ ಕ್ಯಾನ್ಸರ್ ಆಗಿದ್ದಲ್ಲಿ
- ತುರ್ತು ಚಿಕಿತ್ಸೆಯ ವೇಳೆ
- ಕಿಮೋಥೆರಪಿ(ಕ್ಯಾನ್ಸರ್ ರೋಗದ ಚಿಕಿತ್ಸೆ) ವೇಳೆ
- ಅನೀಮಿಯಾ ಉಂಟಾದಾಗ
- ತಲೆಸ್ಸೇಮಿಯಾ(ಅನುವಂಶಿಕ ರೋಗ) ಮತ್ತು ಹಿಮೋಫಿಲಿಯಾ(ಕುಸುಮ ರೋಗ)
- ಹೃದಯದ ಶಸ್ತ್ರಚಿಕಿತ್ಸೆ ವೇಳೆ
- ಚಿಕುನ್‌ಗುನ್ಯಾ ಹಾಗೂ ಡೆಂಗ್ಯೂ ರೋಗಿಗಳಿಗೆ ಪ್ಲೇಟ್‌ಲೆಟ್ ನೀಡಲಾಗುತ್ತದೆ
- ಅಂಗಾಂಗ ಕಸಿ ಮಾಡುವಾಗ



### ಯಾರು ರಕ್ತದಾನ ಮಾಡಬಹುದು?

- 15 ರಿಂದ 65 ವರ್ಷ ವಯಸ್ಸಿನವರು
- ತೂಕ 45 ಕೆ.ಜಿ. ಅಥವಾ ಅದಕ್ಕಿಂತ ಹೆಚ್ಚಿದ್ದರೆ
- ರಕ್ತದಲ್ಲಿ ಹಿಮೋಗ್ಲೋಬಿನ್ ಪ್ರಮಾಣ 12.5 ಗ್ರಾಂಗಿಂತ ಹೆಚ್ಚಿರಬೇಕು
- ಹಿಂದೆ ರಕ್ತದಾನ ಮಾಡಿದ್ದಲ್ಲಿ, ರಕ್ತದಾನ ಮಾಡಿದ ಮೂರು ತಿಂಗಳ ನಂತರ
- ಆರೋಗ್ಯವಂತರಾಗಿರಬೇಕು, ಮಲೇರಿಯಾ, ಟೈಫ್ಯಾಡ್ ಅಥವಾ ಇತರ ಸೊಂಕು ಹರಡುವಂತಹ ರೋಗಗಳು ಇರಬಾರದು.

### ಯಾರು ರಕ್ತದಾನ ಮಾಡುವಂತಿಲ್ಲ?

- ಯಕೃತ್(ಲಿವರ್), ಮೂತ್ರಪಿಂಡ, ಹೃದಯ ಸಂಬಂಧಿ ಕಾಯಿಲೆ ಉಳ್ಳವರು
- ಗರ್ಭಿಣಿಯರು, ಋತು ಸ್ರಾವದಲ್ಲಿರುವ ಸ್ತ್ರೀ, ಮಗುವಿಗೆ ಹಾಲುಣಿಸುವ ತಾಯಂದಿರು
- ರಕ್ತಹೀನತೆ ಇರುವವರು
- ರಕ್ತ ವರ್ಗಾವಣೆ ಮಾಡಿಸಿಕೊಂಡವರು ಮತ್ತು ಮಲೇರಿಯಾ, ಟೈಫಾಯ್ಡ್, ಕಾಮಾಲೆ ರೋಗದಿಂದ ಬಳಲಿದವರು ಮುಂದಿನ 6 ತಿಂಗಳವರೆಗೆ ರಕ್ತದಾನ ಮಾಡುವಂತಿಲ್ಲ
- ಯಾವುದೇ ಸೋಂಕಿನ ವಿರುದ್ಧ ಲಸಿಕೆ ಹಾಕಿಸಿಕೊಂಡವರು ಮುಂದಿನ 3 ತಿಂಗಳವರೆಗೆ ರಕ್ತದಾನ ಮಾಡುವಂತಿಲ್ಲ

ಪರವಾನಗಿ ಹೊಂದಿರುವ ಯಾವುದೇ ರಕ್ತನಿಧಿಗಳಲ್ಲಿ ರಕ್ತದಾನ ಮಾಡಬಹುದಾಗಿದೆ.

## ನೇತ್ರದಾನ



ಸತ್ತ ನಂತರ ದೇಹದ ಜೊತೆ ಕಣ್ಣನ್ನು ಮಣ್ಣುಮಾಡುವ ಅಥವಾ ಸುಡುವ ಬದಲು ದಾನ ಮಾಡಿದರೆ ಒಬ್ಬರ ಅಂಧತ್ವ ದೂರ ಮಾಡಬಹುದು. ನಟಸಾರ್ವಭೌಮ ಡಾ. ರಾಜ್‌ಕುಮಾರ್, ಸಂಘದ ಹಿಂದಿನ ಸರಸಂಘಚಾಲಕರಾಗಿದ್ದ ಪರಮಪೂಜ್ಯ ಸುದರ್ಶನ್ ಅವರು ಹೀಗೆ ಸಮಾಜದ ಅನೇಕ ಗಣ್ಯ ವ್ಯಕ್ತಿಗಳೂ ನೇತ್ರದಾನ ಮಾಡಿದ್ದಾರೆ.


ಮೃತವ್ಯಕ್ತಿಯ ಕಣ್ಣಿನಿಂದ ಕಾರ್ನಿಯಾವನ್ನು ತೆಗೆದು ಅಂಧತ್ವವಿರುವವರಿಗೆ ಕಸಿಮಾಡಲಾಗುತ್ತದೆ. ಕಣ್ಣುಗುಡ್ಡೆಯ ಮುಂದಿನ ಕಪ್ಪು ಭಾಗದಲ್ಲಿದ್ದು, ಹೊರಗಿನಿಂದ ಹರಿಯುತ್ತಿರುವ ಬೆಳಕನ್ನು ಕಣ್ಣಿನ ಹಿಂಭಾಗದೆಡೆಗೆ ಕೇಂದ್ರೀಕರಿಸಲು ನೆರವಾಗುವ, ಅಂಗಿಗುಂಡಿ ಗಾತ್ರ–ತಿಳಿಗಾಜು ರೂಪದ ಪಟಲವೇ 'ಕಾರ್ನಿಯಾ'. ಈ 'ಅಗಾಂಶ'ವೊಂದೇ ಇಡೀ ನಮ್ಮ ದೇಹದಲ್ಲಿ ಪಾರದರ್ಶಕವಾದ ಅಂಗಾಂಶ. ಒಬ್ಬ ದಾನಿಯ ನೇತ್ರದಾನ ಒಂದಕ್ಕಿಂತ ಹೆಚ್ಚು ಅಂಧರ ಕಣ್ಣಿನಲ್ಲಿ ಬೆಳಕನ್ನು ಮೂಡಿಸಬಹುದು. ದೇಶದಲ್ಲಿ ಇನ್ನೂ 4.6 ದಶ ಲಕ್ಷ ಜನರು ಕಾರ್ನಿಯಾ ಸಮಸ್ಯೆಯಿಂದ ಅಂಧರಾಗಿದ್ದು, ಕಾರ್ನಿಯಾ ಕಸಿಯ ಶಸ್ತ್ರಚಿಕಿತ್ಸೆಯಿಂದ ಇವರ ಅಂಧತ್ವ ನಿವಾರಿಸಬಹುದಾಗಿದೆ. ಆದರೆ ಆವಶ್ಯಕತೆಯಿರುವ ಪ್ರಮಾಣದಲ್ಲಿ ಕಾರ್ನಿಯಾ ಪೂರೈಕೆಯಾಗುತ್ತಿಲ್ಲ.

ಶ್ರೀಲಂಕಾದಂತಹ ಪುಟ್ಟ ರಾಷ್ಟ್ರದಲ್ಲಿ ನೇತ್ರದಾನದ ಬಗ್ಗೆ ಜಾಗೃತಿ ಎಷ್ಟಿದೆಯೆಂದರೆ, ಅಲ್ಲಿನವರಿಗೆ ಬೇಕಾದಷ್ಟಲ್ಲದೇ ಹೆಚ್ಚಿನ ಸಂಖ್ಯೆಯಲ್ಲಿ ಜನರು ನೇತ್ರದಾನ ಮಾಡುತ್ತಿದ್ದಾರೆ, ಇದರ ಪರಿಣಾಮವಾಗಿ ಶ್ರೀಲಂಕಾ ಇತರ ಹಲವು ರಾಷ್ಟ್ರಗಳಿಗೂ ಕಾರ್ನಿಯಾ ಒದಗಿಸುತ್ತಿದೆ. ನೇತ್ರದಾನ ಒಂದು ಪುಣ್ಯದ ಕೆಲಸವೆಂಬ ಅರಿವು ಮೂಡಿರುವುದೇ ಇದಕ್ಕೆ ಕಾರಣ. ಹಾಗಿದ್ದರೆ ನೇತ್ರದಾನ ಮಾಡುವ ಬಗೆ ಹೇಗೆ? ಹತ್ತಿರದ ನೇತ್ರಾಲಯವನ್ನು ಸಂಪರ್ಕಿಸಿ ತಮ್ಮ ವಿವರಗಳನ್ನು ನೀಡಿ ನೇತ್ರದಾನದ ಪ್ರತಿಜ್ಞೆ ಮಾಡಬಹುದಾಗಿದೆ. ವ್ಯಕ್ತಿಯ ಮರಣಾ ನಂತರ 6 ಘಂಟೆಗಳೊಳಗಾಗಿ ಕಣ್ಣನ್ನು ತೆಗೆಯಬೇಕಾಗುತ್ತದೆ. ವ್ಯಕ್ತಿ ಸಾಯುವ ಮೊದಲು ನೇತ್ರದಾನದ ಪ್ರತಿಜ್ಞೆ ಮಾಡದಿದ್ದರೂ ಅವರ ಸಂಬಂಧಿಕರು ನಿರ್ಧಾರ ಕೈಗೊಂಡು ಸಹ ನೇತ್ರದಾನಕ್ಕೆ ವ್ಯವಸ್ಥೆ ಮಾಡಬಹುದಾಗಿದೆ. ನೇತ್ರದಾನ ಮಾಡಲು ಯಾವುದೇ ವಯೋಮಿತಿಯಿಲ್ಲ, 1 ವರ್ಷದವರಿಂದ ಹಿಡಿದು ವಯೋವೃದ್ಧರ ವರೆಗೆ ಎಲ್ಲರೂ ನೇತ್ರದಾನ ಮಾಡಬಹುದಾಗಿದೆ. ರೇಬಿಸ್, ಏಡ್ಸ್ ಮತ್ತು ಇತರ ಸೋಂಕಿನ ಕಾಯಿಲೆಯಿಂದ ಮರಣಹೊಂದಿದವರನ್ನು ಬಿಟ್ಟು ಉಳಿದೆಲ್ಲರೂ ನೇತ್ರದಾನ ಮಾಡಬಹುದಾಗಿದೆ.

### ಯುವಕನ ಆದರ್ಶ

**ಕೆಲವು ದಿನಗಳ ಹಿಂದೆ ಬೆಂಗಳೂರಿನ ನೆಲಮಂಗಲದಲ್ಲಿ ಭೀಕರ ಅಪಘಾತಕ್ಕೀಡಾಗಿ ಸಾವನ್ನಪ್ಪಿದ ಹರೀಶ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ, ಸುದ್ದಿವಾಹಿನಿಗಳಲ್ಲಿ ಸಾಕಷ್ಟು ಸುದ್ದಿ ಹಾಗೂ ಚರ್ಚೆಗಳಾಗಿವೆ. ದೇಹವೇ ಇಬ್ಭಾಗವಾಗಿ ನರಳುತ್ತಾ ಸಾವಿನ ದವಡೆಯಲ್ಲಿದ್ದ ಸಮಯದಲ್ಲಿಯೂ ತನ್ನ ಅಂಗಾಗಳನ್ನು, ಕಣ್ಣನ್ನೂ ಬೇರೆಯವರಿಗೆ ದಾನ ಮಾಡಿ ಎನ್ನುವ ಮೂಲಕ ಸಮಯಪ್ರಜ್ಞೆಯ ಜೊತೆಗೆ ಅಗ್ರ ಮಾನವ ಸಂವೇದನೆಯನ್ನು ಮೆರೆದಿದ್ದಾರೆ. ಈ ಘಟನೆಯ ಬಳಿಕ ನೇತ್ರಾಲಯಗಳಿಗೆ ಹೋಗಿ ನೇತ್ರದಾನ ಮಾಡುವುದಾಗಿ ಸಹಿ ಹಾಕುವವರ ಸಂಖ್ಯೆ ಹೆಚ್ಚಾಗಿದೆ ಎನ್ನುವುದು ಗಮನಾರ್ಹ ಸಂಗತಿ. ಹರೀಶ ಅವರ ಹುಟ್ಟೂರಾದ ತುಮಕೂರು ಜಿಲ್ಲೆಯ ಕರೆಗೌಡನಹಳ್ಳಿಯಲ್ಲಿ ಅವರು ನಿಧನರಾದ 11ನೇ ದಿನದಂದು ಅವರ ತಾಯಿಯೂ ಸೇರಿದಂತೆ 170 ಜನರು ನೇತ್ರದಾನ ಸಂಕಲ್ಪ ಮಾಡಿದ್ದಾರೆ. 11 ವರ್ಷದ ಬಾಲಕ ಬೋಮ್ಮೇಶ್‌ನಿಂದ ಹಿಡಿದು 82 ವರ್ಷದ ವೃದ್ಧರೂ ಸಹ ನೇತ್ರದಾನ ಮಾಡಿದ್ದಾರೆ.**

## ಅಂಗಾಂಗ ದಾನ




ಅಂಗಾಂಗ ದಾನ ಇನ್ನೊಬ್ಬರಿಗೆ ಮರುಜನ್ಮವನ್ನೇ ನೀಡಬಲ್ಲದು. ಒಬ್ಬ ವ್ಯಕ್ತಿಯು ದೇಹದ ಅಂಗಾಂಗಗಳು ಒಂಭತ್ತು ಜನರನ್ನು ಉಳಿಸಬಲ್ಲವು. ನಮ್ಮ ದೇಹದ ಪ್ರಮುಖ ಅಂಗಗಳಾದ ಹೃದಯ, ಕಿಡ್ನಿ, ಲಿವರ್, ಪ್ಯಾನ್‌ಕ್ರಿಯಾಸ್ ಮೊದಲಾದ ಅಂಗಗಳನ್ನು ದಾನ ಮಾಡಬಹುದು. ವೈದ್ಯರು ಮಿದುಳು ನಿಷ್ಕ್ರಿಯ(ಬ್ರೇನ್ ಡೆಡ್) ಎಂದು ಘೋಷಿಸಿದ ವ್ಯಕ್ತಿಯ ದೇಹದಿಂದ ಅಂಗಾಂಗಳನ್ನು ತೆಗೆದು ಸರಿಹೊಂದುವ ರೋಗಿಗಳಿಗೆ ಜೋಡಿಸಲಾಗುತ್ತದೆ. ಹಾಗೆಯೇ ಜೀವಂತವಿರುವ ವ್ಯಕ್ತಿ ಎರಡರಲ್ಲಿ ಒಂದು ಕಿಡ್ನಿಯನ್ನು ದಾನಮಾಡಬಹುದು. ನಮ್ಮ ದೇಶದಲ್ಲಿ ವಾರ್ಷಿಕ ಸುಮಾರು 2 ಲಕ್ಷ ಕಿಡ್ನಿಗಳು, 50 ಸಾವಿರ ಲಿವರ್‌ಗಳು 50 ಸಾವಿರ ಹೃದಯಗಳಿಗೆ ಬದಲಿ ಜೋಡಣೆಯ ಬೇಡಿಕೆ ಇದೆ.


*2ನೇ ಪುಟಕ್ಕೆ*

*1ನೇ ಪುಟದಿಂದ...*

ಆದರೆ ಇದರಲ್ಲಿ ಕೇವಲ ಶೇ 2 ರಿಂದ 3 ರಷ್ಟು ರೋಗಿಗಳಿಗೆ ಮಾತ್ರ ದಾನಿಗಳು ಸಿಗುತ್ತಿದ್ದಾರೆ. ಏಡ್ಸ್, ಹೆಪೆಟೈಟಸ್ ಮೊದಲಾದ ಸೋಂಕಿನ ಕಾಯಿಲೆಯಿಂದ ಮೃತರಾದವರ ದೇಹದಿಂದ ಅಂಗದಾನವನ್ನು ಪಡೆಯುವುದಿಲ್ಲ. ಭಾರತದಲ್ಲಿ ಅಂಗಾಂಗ ದಾನವು ಮಾನವ ಅಂಗಾಂಗ ಕಸಿ ಅಧಿನಿಯಮ 1994ರ ವ್ಯಾಪ್ತಿಗೆ ಬರುತ್ತದೆ. ಕಿಡ್ನಿ ಮೊದಲಾದ ಅಂಗಾಂಗಗಳ ವ್ಯಾಪಾರದ ಕರಾಳ ದಂಧೆಯನ್ನು ನಿಯಂತ್ರಿಸಲು ಹಾಗೂ ಅಂಗದಾನವನ್ನು ಪ್ರೋತ್ಸಾಹಿಸುವ ಸಲುವಾಗಿ ಈ ಕಾನೂನನ್ನು ಜಾರಿಗೆ ತರಲಾಗಿದೆ.

ಅಂಗಾಂಗ ದಾನವನ್ನು ಪ್ರೋತ್ಸಾಹಿಸುವ ಸರ್ಕಾರೀ ಹಾಗೂ ಸರ್ಕಾರೇತರ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ವ್ಯಕ್ತಿಗಳು ಸ್ವಯಂಪ್ರೇರಿತರಾಗಿ ಮರಣದ ನಂತರ ತಮ್ಮ ಅಂಗಾಂಗಗಳನ್ನು ದಾನಮಾಡುವ ಪ್ರತಿಜ್ಞೆಯನ್ನು ಈ ಸಂಸ್ಥೆಗಳ ಮೂಲಕ ದಾಖಲಿಸಬಹುದು. ಹಾಗೆಯೇ ಮಿದುಳು ನಿಷ್ಕ್ರಿಯಗೊಂಡ ವ್ಯಕ್ತಿಯ ಸಂಬಂಧಿಗಳು ಅಂಗದಾನದ ಅನುಮತಿ ನೀಡಬಹುದು.



## ದೇಹದಾನ

ಮರಣದ ನಂತರ ಅವರವರ ಮತೀಯ ನಂಬಿಕೆಯಂತೆ ಶವಸಂಸ್ಕಾರ ನೆರವೇರಿಸಲಾಗುತ್ತದೆ. ಇದರ ಬದಲು ಶವವನ್ನು ವೈದ್ಯಕೀಯ ಸಂಶೋಧನೆಯ ಸಲುವಾಗಿ ಸಂಶೋಧನಾ ಕೇಂದ್ರ ಅಥವಾ ಕಾಲೇಜಿಗೆ ನೀಡಿದರೆ ಅದರಿಂದ ನಿಜವಾದ ಉಪಯೋಗ ಆಗಬಹುದು. ಒಂದು ಅಂಕಿಅಂಶದ ಪ್ರಕಾರ, ಪ್ರತಿ ನಾಲ್ವರು ವೈದ್ಯಕೀಯ ವಿದ್ಯಾರ್ಥಿಗಳಿಗೆ ಒಂದು ದೇಹ ಅಭ್ಯಾಸಕ್ಕೆ ಬೇಕು. ಆದರೆ ಈಗ 35 ವಿದ್ಯಾರ್ಥಿಗೆ ಒಂದು ದೇಹ ಲಭ್ಯವಿದೆಯಂತೆ. ಇಲ್ಲವಾಗುವ ದೇಹಕ್ಕಿಂತ ಆ ದೇಹ ಹಲವರ ಉಪಯೋಗಕ್ಕೆ ಲಭ್ಯವಾಗುವುದು ಉತ್ತಮವಲ್ಲವೇ ಎಂಬುದನ್ನು ಯೋಚಿಸಬೇಕಾಗಿದೆ. ಸಂಸ್ಕಾರ ಆಗಬೇಕಾದುದು ಆತ್ಮಕ್ಕೆ, ಆತ್ಮವಿಲ್ಲದ ದೇಹ ನಿಷ್ಪ್ರಯೋಜಕವೇ ಸರಿ.


**ರಾಷ್ಟ್ರೀಯ ಸ್ವಯಂಸೇವಕ ಸಂಘದಲ್ಲಿ ದೇಹದಾನದ ಯೋಚನೆ ಹೊಸದಲ್ಲ. ಇತ್ತೀಚೆಗೆ ಕರ್ನಾಟಕದ ನ. ಕೃಷ್ಣಪ್ಪ ಅವರು ದೇಹದಾನ ಮಾಡಿದ್ದನ್ನು ಕೇಳಿದ್ದೇವೆ. ಈ ಹಿಂದೆ ಜನಸಂಘದ ನಾನಾಜಿ ದೇಶ್‌ಮುಖ್ ಅವರೂ ದೇಹದಾನ ಮಾಡಿದ್ದರು.**

**ಪಟ್ನಾದಲ್ಲಿ ಜುಲೈ 2003ರ ಗುರುಪೂರ್ಣಿಮೆ ಸಮಾರಂಭವೊಂದರಲ್ಲಿ ಬಿಜೆಪಿಯ 68 ಮಂದಿ ಸದಸ್ಯರು ಮರಣಾನಂತರ ತಮ್ಮ ದೇಹದಾನವಾಗಲಿ ಎಂದು ಉಯಿಲು ಬರೆದು, ತಮ್ಮ ಕುಟುಂಬದ ಸಮಕ್ಷಮದಲ್ಲಿ ಆರೆಸ್ಸೆಸ್‌ನ ಸರಸಂಘಚಾಲಕ ಮೋಹನ್ ಭಾಗವತ್ ಅವರಿಗೆ ನೀಡಿದ್ದನ್ನು ಟೈಮ್ಸ್ ಆಫ್ ಇಂಡಿಯಾ ವರದಿ ಮಾಡಿತ್ತು. ಹಾಗೆ ದೇಹದಾನದ ಕರಾರು ಸಲ್ಲಿಸಿದವರಲ್ಲಿ ಸುಶೀಲ್ ಕುಮಾರ್ ಮೋದಿಯವರೂ ಒಬ್ಬರು. ಉಪಸ್ಥಿತರಿದ್ದ ಸರಸಂಘಚಾಲಕರು 'ದೇಹದಾನದ ಸಂಕಲ್ಪ ಬಹಳ ಶ್ರೇಷ್ಠವಾದುದ್ದು. ಅಂಗದಾನವಷ್ಟೇ ಅಲ್ಲದೆ ಮಾನವಕುಲಕ್ಕೆ ಸಹಾಯವಾಗುವ ನಿಟ್ಟಿನಲ್ಲಿ ವೈದ್ಯಕೀಯ ವಿದ್ಯಾರ್ಥಿಗಳ ಅಧ್ಯಯನಕ್ಕಾಗಿ ದೇಹದಾನ ಮಾಡುವುದು ಉತ್ತಮ ಕಾರ್ಯ' ಎಂದರು.**

ಚುಟುಕ ಬ್ರಹ್ಮನೆಂದೇ ಪ್ರಸಿದ್ಧರಾಗಿದ್ದ ಜನಾನುರಾಗಿ ಕವಿ ದಿನಕರ ದೇಸಾಯಿಯವರು ನನ್ನ ದೇಹದ ಬೂದಿ ಎನ್ನುವ ತಮ್ಮ ಒಂದು ಕವಿತೆಯಲ್ಲಿ ಸತ್ತ ಮೇಲೂ ತನ್ನ ದೇಹ ಇತರರ ಸೇವೆಗೆ ನಿಲ್ಲಲಿ, ಹುಟ್ಟು ಸಾವಿನಲ್ಲಿ ಧನ್ಯವಾಗಲಿ ಎಂದು ಹೇಳುತ್ತಾರೆ. ಇಂದಿನ ಸಮಯದಲ್ಲಿ ಅವರಿದ್ದಿದ್ದರೆ ಅಂಗಾಂಗದಾನ ದೇಹದಾನವನ್ನು ಕೊಂಡಾಡುತ್ತಿದ್ದರೇನೋ.


ಮಾರುಕಟ್ಟೆಯಲ್ಲಿ ಲಭ್ಯ

## ವಿವೇಕಾನಂದ ಸಂದೇಶ ಕೌಮುದಿ




ವಿಶ್ವವಿಜೇತ ವಿವೇಕಾನಂದರು ಯಾವ ಕಾರಣಗಳಿಂದಾಗಿ ಯುಗಪುರುಷರೆನ್ನಿಸಿದ್ದಾರೆ. ಯಾವ ಕಾರಣಗಳಿಂದ ಅವರ ಬೋಧೆಗಳು ಅನನ್ಯವೆನಿಸಿವೆ. ಯಾವ ಅಸಾಮಾನ್ಯ ದರ್ಶನ ಅವರನ್ನು ಋಷಿತುಲ್ಯರಾಗಿಸಿದೆ, ಅವರ ಮಾತುಗಳ ವಿಶೇಷ ಸಾಂದರ್ಭಿಕತೆ ಏನು, ಅವುಗಳ ಪರಿಣಾಮಾತಿಶಯತೆಯ ರಹಸ್ಯವೇನು; – ಈ ಅಂಶಗಳ ಸ್ಫುಟೀಕರಣದಿಂದ ಈ ಪೀಳಿಗೆಯವರಿಗೆ ಸ್ವಾಮಿಜೀಯವರ ಮಾತು–ಬರಹಗಳ ಅಂತರ್ಯವನ್ನು ತಿಳಿಯಪಡಿಸುವ ಆಶಯದಿಂದ ಈ ಕೃತಿ ರಚಿತವಾಗಿದೆ. ವಿವೇಕಾನಂದರ ವಿಶಾಲ ವಿಚಾರ ಸಾಗರದಿಂದ ಅತ್ಯುತ್ತಮ ವಾಗ್‌ರತ್ನಗಳನ್ನು ಶೋಧಿಸಿ, ಸೂಕ್ತ ರೀತಿಯಲ್ಲಿ ಅರ್ಥಪೂರ್ಣ ಅಧ್ಯಾಯಗಳಲ್ಲಿ ವಿಂಗಡಿಸಿ, ಪ್ರಭಾವಶಾಲಿಯಾದ ಪೂರಕ ವಿವರಣೆಗಳನ್ನೂ, ಸಂದರ್ಭೋಚಿತ ಮಾಹಿತಿಗಳನ್ನು ಸೇರಿಸಿ ರಚಿತವಾಗಿರುವ ಒಂದು ವಿಶಿಷ್ಟ ಗ್ರಂಥ ಇದು.

**ಲೇಖಕರು** : ಎಸ್.ಆರ್. ರಾಮಸ್ವಾಮಿ
**ಪ್ರಕಾಶಕರು** : ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು
**ಬೆಲೆ ರೂ.** : 100/–

ಪ್ರತಿಗಳಿಗಾಗಿ ಸಂಪರ್ಕಿಸಿ:
**ರಾಷ್ಟ್ರೋತ್ಥಾನ ಸಾಹಿತ್ಯ,** ಕೆಂಪೇಗೌಡನಗರ, ಬೆಂಗಳೂರು – 560 019
ದೂರವಾಣಿ : 080–26612730


## ಉಗ್ರರ ಬೆಂಬಲಕ್ಕೆ ನಿಂತ ಕಾಶ್ಮೀರದ ಮದರಸಾಗಳು



ಜಮ್ಮು ಮತ್ತು ಕಾಶ್ಮೀರದ ಪಂಪೋರ್ ಪಟ್ಟಣದಲ್ಲಿ ಕಟ್ಟಡವೊಂದರ ಒಳ ನುಗ್ಗಿದ ಭಯೋತ್ಪಾದಕರು ಅಲ್ಲಿ ದಾಂಧಲೆ ನಡೆಸಲಾರಂಭಿಸಿದರು. ಒಳಗೆ ಅವಿತುಕೊಂಡಿದ್ದ ಭಯೋತ್ಪಾದಕರನ್ನು ಬಗ್ಗುಬಡಿಯಲು ಭಾರತೀಯ ಯೋಧರು ಕಾರ್ಯಾಚರಣೆಗಿಳಿದರು. ಮೂರು ದಿನಗಳ ಕಾಲ ತಮ್ಮ ಜೀವವನ್ನೇ ಪಣಕ್ಕಿಟ್ಟು ಹೋರಾಟ ನಡೆಸಿ ಭಯೋತ್ಪಾದಕರ ಹತ್ಯೆ ಮಾಡಿದರು. ದುರ್ದೈವದ ಸಂಗತಿಯೆಂದರೆ ವೀರ ಯೋಧರು ಕಾರ್ಯಾಚರಣೆ ನಡೆಸುತ್ತಿದ್ದ ಸಂದರ್ಭದಲ್ಲಿ ಸ್ಥಳೀಯ ಮುಸಲ್ಮಾನರು ಭಯೋತ್ಪಾದಕರ ಬೆಂಬಲಕ್ಕೆ ನಿಂತರು! ನೆರೆಹೊರೆಯ ಮಸೀದಿಗಳಿಂದ ಭಯೋತ್ಪಾದಕರನ್ನು 'ಮುಜಾಹಿದ್'ಗಳು (ಪವಿತ್ರ ಸಮರ ವೀರರು) 'ಜಾಗೋ ಜಾಗೋ ಸುಬಹ್ ಹುಯಿ' (ಏಳಿ, ಏಳಿ ಬೆಳಗಾಗಿದೆ) 'ಜೀವೇ, ಜೀವೇ ಪಾಕಿಸ್ತಾನ್! ಮತ್ತು 'ಹಮ್ ಕ್ಯಾ ಚಾಹ್ತೆ – ಆಜಾದಿ' ಇತ್ಯಾದಿ ಧ್ವನಿಮುದ್ರಿತ ಘೋಷಣೆಗಳು ಮಸೀದಿಗಳ ಧ್ವನಿ ವರ್ಧಕಗಳ ಮೂಲಕ ಇಡೀ ದಿನ ಮೊಳಗುತ್ತಿದ್ದವು. ಈ ಧ್ವನಿವರ್ಧಕಗಳು ಪಾಕಿಸ್ತಾನದಿಂದ ಸರಬರಾಜಾಗಿರಬಹುದು ಎನ್ನಲಾಗುತ್ತಿದೆ. ಇದರ ಪ್ರಸಾರವನ್ನು ನಿಲ್ಲಿಸುವ ಸಲುವಾಗಿ ಮಸೀದಿಗಳ ಒಳಹೋಗಲು ಪೊಲೀಸರಿಗೂ ಸಾಧ್ಯವಾಗಲಿಲ್ಲ ಎಂದು ಗುಪ್ತಚರ ಸಂಸ್ಥೆಗಳು ವರದಿ ಮಾಡಿವೆ.

## ಗೋರಕ್ಷಣೆಗೆ ಸ್ಟಾರ್ಟಪ್

ವಯಸ್ಸಾದ ದನಗಳನ್ನು ರಕ್ಷಿಸುವ ಸಲುವಾಗಿ ಗೋ ಆಧಾರಿತ ಉತ್ಪನ್ನಗಳನ್ನು ತಯಾರಿಸುವ ಸ್ಟಾರ್ಟಪ್ ಆರಂಬಿಸುವುದಾಗಿ ಉತ್ತರಪ್ರದೇಶದ 'ಗೋ ಗ್ರೀನ್ ಇಕಾನಮಿ' ತಿಳಿಸಿದೆ. ಸಂಸ್ಥೆಯು ವಾರಾಣಸಿ ಮತ್ತು ತೆಲಂಗಾಣದಲ್ಲಿ ಮೊದಲ ಘಟಕಗಳನ್ನು ಆರಂಬಿಸಲಿದೆ. ಗೋ ಆಧಾರಿತ ಆರೋಗ್ಯ ಉತನ್ನ, ಸೌಂದರ್ಯವರ್ಧಕಗಳು ಮತ್ತಿತರ ವಸ್ತುಗಳನ್ನು ಉತ್ಪಾದಿಸಲಾಗುವುದು. ಗೋಬರ್ ಗ್ಯಾಸ್ ತಯಾರಿಸುವ ಘಟಕಗಳ ಆರಂಭ ಹಾಗೂ ಗೋಬರ್ ಗ್ಯಾಸ್ ಬಳಕೆ ಹೆಚ್ಚಿಸಲು ಉತ್ತೇಜನ ನೀಡಲಾಗುವುದು ಎಂದು ಸಂಸ್ಥೆ ತಿಳಿಸಿದೆ.



# ಮಣ್ಣಿನ 'ಫಲ' ಹಿಡಿದಿಡುವ ಕಲೆಯಿದು




ಮಳೆ ನೀರನ್ನು ಸಂಗ್ರಹ ಮಾಡುವುದು ಅನೇಕರಿಗೆ ಗೊತ್ತು. ಇದಕ್ಕೆ ನಾನಾ ವಿಧಾನಗಳ ಬಳಕೆ ಇದೆ. ಇದೇ ರೀತಿ ಮಣ್ಣಿನ ಫಲವತ್ತತೆಯನ್ನು ಹಿಡಿದಿಡುವ ಪ್ರಯೋಗ ಗದಗ ಜಿಲ್ಲೆಯ ರೋಣ ತಾಲ್ಲೂಕಿನಲ್ಲಿ ಆಗಿದೆ. ರೋಣ–ಗಜೇಂದ್ರಗಢ ನಡುವಿನ ಸೂಡಿ ಗ್ರಾಮದ ಸಮೀಪದ ಹೊಲದಲ್ಲಿ ಇಂಥ ಹೊಸ ಸಾಹಸಕ್ಕೆ ಕೈ ಹಾಕಿದವರು ಎಲೆಕ್ಟ್ರಾನಿಕ್ಸ್‌ನಲ್ಲಿ ಎಂಜಿನಿಯರಿಂಗ್ ಪದವಿ ಪಡೆದಿರುವ ಮಲ್ಲಿಕಾರ್ಜುನ ಕಂಬಳ್ಯಾಳ.

ನೈಸರ್ಗಿಕವಾಗಿ ಹರಿದು ಹೋಗುವ ನೀರಿನ ಗತಿಯನ್ನು ಬದಲಿಸಿ ಅದರ ವೇಗಕ್ಕೆ ಕಡಿವಾಣ ಹಾಕುವುದು, ನೀರಿನೊಂದಿಗೆ ಹರಿದು ಹೋಗುವ ಫಲವತ್ತಾದ ಮಣ್ಣನ್ನು ಹಿಡಿದಿಡುವುದು ಹಾಗೂ ಅದನ್ನು ವಾಪಸ್ ಹೊಲಕ್ಕೆ ಹಾಕುವುದು ಇವರು ಮಾಡಿರುವ ಪ್ರಯೋಗದ ಸುಲಭ ಸೂತ್ರ.

ಕೃಷಿಕ ಮನೆತನದವರಾದ ಮಲ್ಲಿಕಾರ್ಜುನ ಹುಬ್ಬಳ್ಳಿ ನಗರದಲ್ಲಿ ಉದ್ಯಮ ನಡೆಸುತ್ತಿದ್ದಾರೆ. ನವೀಕರಿಸಬಲ್ಲ ಇಂಧನದ ಬಗ್ಗೆ ಸಂಶೋಧನೆ, ಚಟುವಟಿಕೆಯಲ್ಲಿ ತೊಡಗಿದ್ದಾರೆ. ಊರಿನಲ್ಲಿ ಸಾಕಷ್ಟು ಜಮೀನು ಇದೆ. ಈ ಪೈಕಿ 8 ಎಕರೆ ಹೊಲವನ್ನು ಪ್ರಯೋಗಕ್ಕೆ ಬಳಸಿಕೊಂಡಿದ್ದಾರೆ. ಕಳೆದ ಮಳೆಗಾಲದಲ್ಲಿ ಅವರು ಪ್ರಯೋಗ ಮಾಡಿದ್ದಾರೆ. ಸೂರ್ಯಕಾಂತಿ ಬಿತ್ತಿದ ಹೊಲದಲ್ಲಿ ಮಣ್ಣಿನ ಫಲವತ್ತಾದ ಅಂಶವನ್ನು ಹಿಡಿದಿಟ್ಟಿದ್ದಾರೆ. ಮುಂದಿನ ಮಳೆಗಾಲದಲ್ಲಿ ಇದನ್ನು ವಾಪಸ್ ಹೊಲಕ್ಕೆ ಹಾಕಿ ಮಣ್ಣಿನ ಗುಣವನ್ನು ಕಾಪಾಡಿಕೊಳ್ಳುವುದು ಅವರ ಉದ್ದೇಶ.

**ಪ್ರಯೋಗದ ವಿಧಾನ:** ಮಲ್ಲಿಕಾರ್ಜುನ ಅವರು ಪ್ರಯೋಗ ಮಾಡಿದ ಹೊಲ ಬರಡು ಭೂಮಿಯಂತಿತ್ತು. ಹೀಗಾಗಿ ಅನೇಕ ವರ್ಷಗಳಿಂದ ಇಲ್ಲಿ ಯಾವುದೇ ಕೃಷಿ ನಡೆದಿಲ್ಲ. ಇದಕ್ಕೆ ಮರುಜೀವ ನೀಡುವುದಕ್ಕಾಗಿ ಅವರು ಮೊದಲು ಮಾಡಿದ ಕಾರ್ಯ, ಜಲಾನಯನ ಪ್ರದೇಶವನ್ನು ಪತ್ತೆ ಮಾಡಿದ್ದು. ಗುಡ್ಡದಂಥ ಪ್ರದೇಶದಿಂದ ನೀರು ಹೊಲಕ್ಕೆ ಪ್ರವೇಶಿಸುವ ಜಾಗದಲ್ಲಿ ಆರು ಅಡಿ ಆಳವಿರುವ ಅಗಲವಾದ ಗುಂಡಿ ತೋಡಿದರು. ಇದರಲ್ಲಿ ತುಂಬಿ ಹೆಚ್ಚಾದ ನೀರು ಹರಿದು ಹೋಗಲು ಎರಡೂ ಬದಿಯಲ್ಲಿ ಜಾಗ ಮಾಡಿದರು. ಈ ನೀರು ಹರಿದು ಹೋಗುವ ದಾರಿಯಲ್ಲಿ ಹೊಲದ ಮಧ್ಯದಲ್ಲಿ ಮತ್ತೊಂದು ಗುಂಡಿ ತೋಡಿದರು. ಇದರಲ್ಲೂ ತುಂಬಿದ ನೀರು ಹರಿದು ಹೋಗಲು ದಾರಿ ಮಾಡಿದರು. ಹೊಲದ ಕೆಳಭಾಗದಲ್ಲಿ ಮತ್ತೊಂದು ಗುಂಡಿ ತೋಡಿದರು. ನೀರು ಹರಿಯುವಾಗ ಮಣ್ಣಿನ ಫಲವತ್ತಾದ ಭಾಗ ಅದರೊಂದಿಗೆ ಹರಿದು ಹೋಗುತ್ತದೆ. ಈ ಮಣ್ಣನ್ನು ಹೊಲದಲ್ಲೇ ಉಳಿಸುವುದು ಈ ಪ್ರಯೋಗದ ಉದ್ದೇಶ. ಮಳೆಗಾಲ ಮುಗಿದ ನಂತರ ಮಲ್ಲಿಕಾರ್ಜುನ ಅವರ ಹೊಲದಲ್ಲಿರುವ ಮೂರೂ ಹೊಂಡಗಳಲ್ಲಿ ಫಲವತ್ತಾದ ಮಣ್ಣಿನ ಭಾಗ ವಿವಿಧ ಪದರಗಳಾಗಿ ನಿಂತಿದೆ. 'ಪ್ರತಿ ಹೊಲದಲ್ಲೂ ಇಂಥ ಪ್ರಯೋಗಗಳನ್ನು ಮಾಡಿದರೆ ಹೊಲದ ಫಲವತ್ತತೆಯನ್ನು ಅದರ ಮಾಲೀಕರೇ ಬಳಸಿಕೊಳ್ಳಬಹುದು' ಎನ್ನುತ್ತಾರೆ ಮಲ್ಲಿಕಾರ್ಜುನ.

'ನಿರೀಕ್ಷಿತ ಬೆಳೆ ಸಿಗುತ್ತಿಲ್ಲ ಎಂದು ಈ ಹೊಲವನ್ನು ಲಾವಣಿ ಪಡೆಯಲು ಯಾರೂ ಮುಂದೆ ಬರುತ್ತಿರಲಿಲ್ಲ. ಹೀಗಾಗಿ ಕೆಲವು ವರ್ಷ ಇದು ಮರುಭೂಮಿಯಂತಾಗಿತ್ತು. ಹೊಲದ ಮೂಲಕ ಹರಿದು ಹೋಗುವ ನೀರನ್ನು ಹಿಡಿದಿಡಲು ಮುಂದಾದೆ. ಅದರೊಂದಿಗೆ ಮಣ್ಣಿನ ಸಂಪತ್ತನ್ನು ಕೂಡ ಹಿಡಿದಿರಿಸಿ ಮರುಬಳಕೆ ಮಾಡಲು ಮುಂದಾದೆ, ನೀರು ಚೆನ್ನಾಗಿ ಸಿಕ್ಕಿದ್ದರಿಂದ ಸೂರ್ಯಕಾಂತಿ ಸಂಪದ್ಭರಿತವಾಗಿ ಬೆಳೆದಿದೆ. ಮಣ್ಣಿನ ಸಾರವೂ ಉಳಿದಿದೆ' ಎನ್ನುತ್ತಾರೆ ಕಂಬಳ್ಯಾಳ.

ಪ್ರತಿಯೊಬ್ಬರೂ ಇಂಥ ಪ್ರಯೋಗ ಮಾಡಿದರೆ ಅವರವರ ಹೊಲದ ಮಣ್ಣಿನ ಸಂಪತ್ತು ಹಾಳಾಗುವುದನ್ನು ತಡೆಯಬಹುದು. ಮಳೆನೀರು ಸಂಗ್ರಹ ಪದ್ಧತಿಯನ್ನು ಬಹುತೇಕರು ಅನುಸರಿಸುತ್ತಾರೆ. ಆದರೆ ಹೊಲದ ಮಣ್ಣು ಕೊಚ್ಚಿಕೊಂಡು ಹೋಗುವುದನ್ನು ತಡೆಯುವ ಮಾರ್ಗ ಯಾರೂ ಅನುಸರಿಸುತ್ತಿಲ್ಲ. ಹೀಗಾಗಿ ಗೊಬ್ಬರ ಹೆಚ್ಚಾಗಿ ಬಳಸಬೇಕಾಗುತ್ತದೆ. ಈ ಪದ್ಧತಿ ಅನುಸರಿಸಿದರೆ ಅವರವರ ಹೊಲದ ಮಣ್ಣಿನ ಗುಣದ ಫಲ ಅವರಿಗೇ ಸಿಗುತ್ತದೆ' ಎಂಬುದು ಅವರ ವಾದ.

**ಸಂಪಾದಕೀಯ ಸಹಕಾರ** **ಶ್ರೀಹರ್ಷಪೇರ್ಲ, ಸತ್ಯನಾರಾಯಣ ಶಾನುಭಾಗ, ಪ್ರವೀಣ್ ಪಟವರ್ಧನ್, ಶೈಲೇಶ್ ಕುಲಕರ್ಣಿ, ಶ್ರೀವತ್ಸ ಸಿ.ಎಂ., ಪ್ರತಾಪ ಕೊಡಂಚ, ಶಶಾಂಕ್ ಹತ್ವಾರ್, ರಾಧಾಕೃಷ್ಣ ಹೊಳ್ಳ, ಮೊಳಹಳ್ಳಿ ಅನಿಲ್‌ಕುಮಾರ್**



2018ರ ಮೇ 1ರೊಳಗೆ ಎಲ್ಲ ಗ್ರಾಮಗಳಿಗೂ ವಿದ್ಯುತ್ ಸಂಪರ್ಕ ಕಲ್ಪಿಸುವ ಗುರಿಯನ್ನಿರಿಸಿಕೊಳ್ಳಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. 2015ರ ಏಪ್ರಿಲ್ 1ರವರೆಗಿನ ಲೆಕ್ಕಾಚಾರದ ಪ್ರಕಾರ ದೇಶದ 18,542 ಹಳ್ಳಿಗಳು ಇನ್ನೂ ವಿದ್ಯುತ್ ಸಂಪರ್ಕ ಪಡೆದುಕೊಂಡಿಲ್ಲ. ಮುಂದಿನ 1000 ದಿನಗಳ ಅವಧಿಯಲ್ಲಿ ಅಂದರೆ ಹೆಚ್ಚುಕಡಿಮೆ 3 ವರ್ಷಗಳ ಅವಧಿಯಲ್ಲಿ ದೇಶದ ಪ್ರತಿಯೊಂದು ಹಳ್ಳಿಗೂ ವಿದ್ಯುತ್ ಸಂಪರ್ಕ ಒದಗಿಸುವ ಮಹತ್ವಾಕಾಂಕ್ಷೆಯ ಯೋಜನೆಯನ್ನು ಕೇಂದ್ರ ಸರ್ಕಾರ ರೂಪಿಸಿದೆ. 2016ರ ಫೆ. 23ರ ವರೆಗೆ 5542 ಹಳ್ಳಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಇದು ಕಳೆದ ಮೂರು ವರ್ಷಗಳಲ್ಲಿ ನೀಡಲಾದ ಒಟ್ಟು ಸಂಪರ್ಕಕ್ಕಿಂತ ಹೆಚ್ಚು. 2018ರ ಮೇ 1ರೊಳಗೆ ಉಳಿದ ಎಲ್ಲಾ ಹಳ್ಳಿಗಳಿಗೂ ವಿದ್ಯುತ್ ಸಂಪರ್ಕ ನೀಡುವ ಉದ್ದೇಶದಿಂದ ದೀನ್‌ದಯಾಳ್ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆ ಮತ್ತು ಸಮಗ್ರ ವಿದ್ಯುತ್ ಅಭಿವೃದ್ಧಿ ಯೋಜನೆಯಡಿ 8500 ಕೋಟಿ ರೂ.ಗಳನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ.



**ನೇತಾಜಿ ಸುಭಾಷ್ ಚಂದ್ರ ಬೋಸ್‌ಗೆ ಸಂಬಂಧಿಸಿದಂತಹ ದಾಖಲೆಗಳಿದ್ದರೆ, ಅದನ್ನು ಭಾರತಕ್ಕೆ ನೀಡುವಂತೆ ಅಮೆರಿಕ, ಆಸ್ಟ್ರೇಲಿಯಾ, ಜರ್ಮನಿ, ಇಟಲಿ, ಜಪಾನ್, ರಷ್ಯಾ, ಬ್ರಿಟನ್ ಸೇರಿದಂತೆ ಹಲವು ದೇಶಗಳಿಗೆ ಭಾರತ ಸರ್ಕಾರ ಮನವಿ ಮಾಡಿದೆ. ಈ ಸಂಬಂಧ ರಷ್ಯನ್ ಫೆಡರೇಷನ್, ಜರ್ಮನಿ ಫೆಡರಲ್ ರಿಪಬ್ಲಿಕ್, ಜಪಾನ್ ಮತ್ತು ಇಂಗ್ಲೆಂಡ್‌ನಿಂದ ಪ್ರತಿಕ್ರಿಯೆ ಬಂದಿದೆ. ಆದರೆ, ಆಸ್ಟ್ರೇಲಿಯಾ, ಇಟಲಿ ಮತ್ತು ಅಮೆರಿಕದಿಂದ ಇನ್ನೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ ಎಂದು ಅವರು ಹೇಳಿದ್ದಾರೆ. ಈಗಾಗಲೇ ಸರ್ಕಾರದ ಬಳಿ ಇದ್ದ ನೇತಾಜಿಗೆ ಸಂಬಂಧ ಪಟ್ಟ ದಾಖಲೆಗಳನ್ನು ಬಹಿರಂಗಗೊಳಿಸಲಾಗಿದೆ. ಇವೆಲ್ಲವನ್ನು ರಾಷ್ಟ್ರೀಯ ಪತ್ರಾಗಾರ ಇಲಾಖೆಗೆ ಹಸ್ತಾಂತರಿಸಲಾಗಿದೆ. ಮತ್ತಷ್ಟು ದಾಖಲೆಗಳನ್ನು ಕಲೆ ಹಾಕುವುದಕ್ಕೆ ಭಾರತ ಪ್ರಯತ್ನಿಸುತ್ತಿದೆ ಎಂದು ಗೃಹ ಇಲಾಖೆಯ ರಾಜ್ಯ ಸಚಿವ ಹರಿಬಾಯ್ ಚೌಧರಿ ಅವರು ಮಾಹಿತಿ ನೀಡಿದ್ದಾರೆ.**



2016ರ ಸಾಲಿನ ಅಮರನಾಥ ಯಾತ್ರೆಯು ಜುಲೈ 2 ರಂದು ಆರಂಭವಾಗಲಿದ್ದು, ಆಗಸ್ಟ್ 18 ರಂದು ಕೊನೆಗೊಳ್ಳಲಿದೆ. ಬಾಲ್ಟಲ್ ಮತ್ತು ಚಂದನ್‌ವಾರಿ ಮಾರ್ಗಗಳ ಮೂಲಕ ಏಕಕಾಲದಲ್ಲಿ ಆರಂಭವಾಗಲಿರುವ ಯಾತ್ರೆಯು ಒಟ್ಟು 48 ದಿನಗಳ ಕಾಲ ನಡೆಯಲಿದೆ. ಇದಕ್ಕಾಗಿ ಈಗಾಗಲೇ ಹೆಸರು ನೋಂದಾಯಿಸುವ ಪ್ರಕ್ರಿಯೆ ಆರಂಭವಾಗಿದ್ದು, ಇದಕ್ಕಾಗಿ ದೇಶದಾದ್ಯಂತ 432 ಬ್ಯಾಂಕ್ ಶಾಖೆಗಳನ್ನು ಗುರುತಿಸಲಾಗಿದೆ ಎಂದು ಶ್ರೀ ಅಮರನಾಥ ದೇಗುಲ ಮಂಡಳಿ ತಿಳಿಸಿದೆ.



**ಕಳೆದ ಮೂರು ವರ್ಷಗಳ ಅವಧಿಯಲ್ಲಿ ಪಾಕಿಸ್ತಾನದಿಂದ ಭಾರತಕ್ಕೆ 98,796 ಕೋಟಿ ರೂ.ಗಳನ್ನು ರವಾನಿಸಲಾಗಿದೆ ಎಂದು ವಿಶ್ವ ಬ್ಯಾಂಕ್ ತಿಳಿಸಿದೆ. ಆದರೆ ಇದು ಅಧಿಕೃತ ಮಾಹಿತಿಯಲ್ಲ ತಾರ್ಕಿಕ ಊಹೆ ಎಂದು ವಿಶ್ವ ಬ್ಯಾಂಕ್ ತಿಳಿಸಿದೆ. ಆದರೆ ಪಾಕಿಸ್ತಾನದಲ್ಲಿ ಅಷ್ಟೊಂದು ಪ್ರಮಾಣದಲ್ಲಿ ಅನಿವಾಸಿ ಭಾರತೀಯರಿಲ್ಲ, ಅಲ್ಲದೆ ಮನೆಗೆ ಕಳುಹಿಸುವ ಹಣದ ಮೊತ್ತ ಇಷ್ಟೊಂದು ಪ್ರಮಾಣದಲ್ಲಿಲ್ಲ ಎನ್ನಲಾಗಿದೆ. 2016ರ ವಿಶ್ವಬ್ಯಾಂಕ್ ವಲಸೆ ಮತ್ತು ಹಣ ರವಾನೆ ಪಟ್ಟಿಯಲ್ಲಿ ಭಾರತ ಮೊದಲ ಸ್ಥಾನದಲ್ಲಿದೆ. ಭಾರತಕ್ಕೆ ಒಟ್ಟು 72 ಬಿಲಿಯನ್ ಡಾಲರ್ (4.95 ಲಕ್ಷ ಕೋಟಿ ರೂ.) ರವಾನೆಯಾಗಿದೆ. ಎರಡನೇ ಸ್ಥಾನದಲ್ಲಿ ಚೀನಾ(64 ಬಿಲಿಯನ್ ಡಾಲರ್)ಮತ್ತು ಮೂರನೇ ಸ್ಥಾನದಲ್ಲಿ ಫಿಲಿಪ್ಪೀನ್ಸ್(30 ಬಿಲಿಯನ್ ಡಾಲರ್) ಇದೆ.**

ದೇಶದ ವಿವಿಧೆಡೆಗಳಲ್ಲಿ 33 ಸೌರವಿದ್ಯುತ್ ಪಾರ್ಕ್‌ಗಳನ್ನು ಸ್ಥಾಪಿಸಲಾಗುವುದು ಎಂದು ಕೇಂದ್ರ ಇಂಧನ ಸಚಿವ ಪೀಯೂಷ್



ಗೋಯಲ್ ತಿಳಿಸಿದ್ದಾರೆ. ಸೌರವಿದ್ಯುತ್ ಉತ್ಪಾದನಾ ವೆಚ್ಚ ಕಡಿಮೆ ಮಾಡಲು ಸರ್ಕಾರವು ಹಲವಾರು ಕ್ರಮಗಳನ್ನು ಕೈಗೊಂಡಿದೆ. ಸೀಮಾ ಸುಂಕ, ಅಬಕಾರಿ ಸುಂಕ ಇತ್ಯಾದಿಗಳನ್ನು ಕಡಿತಗೊಳಿಸುವುದರ ಜೊತೆಗೆ ಉತ್ಪಾದಕರಿಗೆ ಪ್ರೋತ್ಸಾಹ ನೀಡಲಾಗುವುದು ಎಂದು ಅವರು ಹೇಳಿದರು.



**ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ನಡೆದ ದೇಶದ್ರೋಹ ಪ್ರಕರಣದ ಬಳಿಕ ಎಲ್ಲ ಕೇಂದ್ರೀಯ ವಿಶ್ವವಿದ್ಯಾಲಯಗಳಲ್ಲಿ ರಾಷ್ಟ್ರಧ್ವಜಾರೋಹಣ ಮಾಡಬೇಕೆಂದು ಸುತ್ತೋಲೆ ಹೊರಡಿಸಿದ್ದ ಕೇಂದ್ರ ಸರ್ಕಾರ ಇದೀಗ ಅದೇ ನಿಯಮವನ್ನು ಕೇಂದ್ರೀಯ ವಿದ್ಯಾಲಯಗಳಿಗೂ ವಿಸ್ತರಿಸಿದೆ. ದೇಶದ ಎಲ್ಲ ಕೇಂದ್ರೀಯ ವಿದ್ಯಾಲಯಗಳಲ್ಲಿ ಪ್ರತಿ ದಿನ ಕಡ್ಡಾಯವಾಗಿ ರಾಷ್ಟ್ರ ಧ್ವಜಾರೋಹಣ ಮಾಡಬೇಕು. ಪ್ರಾಂಶುಪಾಲರು ಧ್ವಜಾರೋಹಣ ಕಾರ್ಯಕ್ರಮದ ನೇತೃತ್ವ ವಹಿಸಬೇಕು ಎಂದು ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯ ಸೂಚಿಸಿದೆ.**

# ಸಾಲುದ್ದದ ಸುದ್ದಿಗಳು

ಜಮ್ಮು-ಕಾಶ್ಮೀರದ ಸಿಯಾಚಿನ್ ಭೂ ಪ್ರದೇಶವನ್ನು ಆಕ್ರಮಿಸಿಕೊಳ್ಳಲು ಪಾಕಿಸ್ತಾನ ಮತ್ತೆ ಪ್ರಯತ್ನಿಸುವುದಿಲ್ಲ ಎಂಬ ನಂಬಿಕೆ ಇಲ್ಲದಿರುವುದರಿಂದ ಈ ಪ್ರದೇಶದಿಂದ ಸೇನೆಯನ್ನು ಹಿಂಪಡೆದುಕೊಳ್ಳುವುದಿಲ್ಲ ಎಂದು ರಕ್ಷಣಾ ಸಚಿವ ಮನೋಹರ ಪರಿಕ್ಕರ್ ತಿಳಿಸಿದ್ದಾರೆ.

**ಸಹಾಯ-ನೆರವು ಯಾರು ನೀಡಬಹುದು? ಎಂಬ ಪ್ರಶ್ನೆಗೆ ಸಹಜವಾಗಿ ಹಣವಿರುವವರು ಎನ್ನುತ್ತೇವೆ. ಆದರೆ ಇದು ಎಷ್ಟು ಸರಿ ಎಂಬಂತೆ ತಮಿಳುನಾಡಿನ ಚೆನ್ನೈನಲ್ಲೊಂದು ಘಟನೆ ನಡೆದಿದೆ. ಅವರು ರಸ್ತೆಯ ಬದಿಯಲ್ಲೇ ವಾಸಿಸುವ ಹತ್ತು-ಹದಿನೈದು ವರ್ಷದ ನಡುವಿನ ಮಕ್ಕಳು. ಈ ಮಕ್ಕಳು ಶಾಲೆಗೆ ಹೋಗುವುದೂ ಅಪರೂಪವೇ. ಈ ಬಾಲಕರು ಚೆನ್ನೈ ಇತ್ತೀಚೆಗೆ ಭೀಕರ ಮಳೆ, ಪ್ರವಾಹದಿಂದ ತತ್ತರಿಸಿದಾಗ ಅಲ್ಲಿನ ಪರಿಹಾರ ಕಾರ್ಯಗಳಲ್ಲಿ ಸತತ 20 ದಿನಗಳವರೆಗೆ ದಿನಕ್ಕೆ 10 ಗಂಟೆಯಂತೆ ದುಡಿದಿದ್ದಾರೆ. ಕಡುಬಡತನದಲ್ಲಿ ಬಳಲುವ ಈ ಮಕ್ಕಳಿಗೆ ಪಾಠ, ಊಟ, ವಸತಿ ಎಲ್ಲವೂ ಕಷ್ಟಕರ. ಪೋಷಕರು ಕೂಲಿಯ ಕೆಲಸ ಮಾಡಿ ಇವರನ್ನು ಸಾಕುತ್ತಿದ್ದಾರೆ. ಆದರೆ ಕಷ್ಟದಲ್ಲಿರುವವರಿಗೆ ನೆರವಾಗುವ ಮನಸ್ಸು ಹಾಗೂ ಪರಿಹಾರಕಾರ್ಯದಲ್ಲಿನ ಅವರ ಶ್ರದ್ಧೆಯನ್ನು ಗುರುತಿಸಿದ ಬಿಜೆಪಿ ಸಂಸದ ತರುಣ್ ವಿಜಯ್ ಈ ಮಕ್ಕಳ ವಿದ್ಯಾಭ್ಯಾಸದ ಹೊಣೆ ಹೊರಲು ನಿಶ್ಚಯಿಸಿದ್ದಾರೆ. ಉತ್ತಮ ದರ್ಜೆಯ ಶಾಲೆಗಳಲ್ಲಿ ದಾಖಲಿಸಲು ನಿರ್ಧರಿಸಿದ್ದಾರೆ. ಮಾಧ್ಯಮ ಸಂಸ್ಥೆ ಎನ್‌ಡಿ ಟಿವಿ ಸುದ್ದಿಸಂಸ್ಥೆಯೂ ಇಂತಹ ಮಕ್ಕಳನ್ನು ಗುರುತಿಸಿ 'ಇಂಡಿಯನ್ ಆಫ್ ದಿ ಇಯರ್' ಕಾರ್ಯಕ್ರಮದಲ್ಲಿ ಸನ್ಮಾನಿಸಿ ಪ್ರಶಂಸಿಸಿದೆ.**

ರಸ್ತೆಯಲ್ಲಿನ ಗುಂಡಿಗಳ ಸಮಸ್ಯೆ ಎಲ್ಲೆಡೆ ಕಾಣುತ್ತಿದ್ದೇವೆ. ಈ ಗುಂಡಿಗಳನ್ನು ಅಂದಾಜಿಸಲಾಗದ ದಾರುಣ ಸಾವನ್ನಪ್ಪುತ್ತಿರುವುದನ್ನು ಕೇಳುತ್ತೇವೆ. ಆದರೂ ಇದನ್ನು ಪರಿಹರಿಸಬೇಕಾದವರು ಸರ್ಕಾರ ಎಂದು ಸರ್ಕಾರವನ್ನು ಬೈಯುತ್ತಿರುತ್ತೇವೆ. ನಮ್ಮ ಸ್ನೇಹಿತರೆಲ್ಲ ಸೇರಿ ನಾವ್ಯಾಕೆ, ಈ ಕೆಲಸ ಮಾಡಬಾರದು ಎಂದು ಯೋಚಿಸಿದ್ದರೆ ಪರಿಸ್ಥಿತಿ ಹೀಗಿರುತ್ತಿರಲಿಲ್ಲವೇನೋ. ಮುಂಬಯಿ ನಗರದ ತರಕಾರಿ ವ್ಯಾಪಾರಿ ದಾದಾರಾವ್ ಬಿಲ್ಹೋರೆ ಯವರ ಮಗನೂ ರಸ್ತೆ ಗುಂಡಿಯಿಂದಾಗಿ ನಡೆದ ಅಪಘಾತದಿಂದಾಗಿ ಸಾವನ್ನಪ್ಪಿದ. ದಾದಾರಾವ್ ಬಿಲ್ಹೋರೆ



## ರೈತನ ಮಗಳಿಗೆ ಎಂಟು ಚಿನ್ನದ ಪದಕ!

ರಾಯಚೂರು ಜಿಲ್ಲೆಯ ಮಾಚನೂರಿನ ರೈತರ ಮಗಳಾದ ಶಿವಬಸಮ್ಮ ಅವರಿಗೆ ಗುಲಬರ್ಗಾ ವಿಶ್ವವಿದ್ಯಾಲಯದ 34ನೇ ಘಟಿಕೋತ್ಸವದಲ್ಲಿ ಸ್ನಾತಕೋತ್ತರ ಕನ್ನಡ ಪದವಿಯಲ್ಲಿ ಎಂಟು ಚಿನ್ನದ ಪದಕಗಳನ್ನು ಪಡೆದಿದ್ದಾರೆ.

ತಂದೆ ಶಿವಪ್ಪ ಹಾಗೂ ತಾಯಿ ಬಸಮ್ಮ ಇಬ್ಬರೂ ಕೃಷಿಕರು. ಎಂಟು ಎಕರೆ ಜಮೀನಿದೆ. ಆದರೆ ಒಣ ಬೇಸಾಯ. ಇದೇ ಜೀವನಾಧಾರ. ಇದರಲ್ಲಿಯೇ ಉಳಿಸಿ ಮಗಳಿಗೆ ವಿದ್ಯಾಭ್ಯಾಸ ನೀಡುತ್ತಿದ್ದಾರೆ.

ಈ ದಂಪತಿಗಳಿಗೆ ಒಟ್ಟು ನಾಲ್ಕು ಮಂದಿ ಮಕ್ಕಳಲ್ಲಿ ಮೂವರು ಹೆಣ್ಣುಮಕ್ಕಳು. ಇವರ ಮನೆಯಲ್ಲಿ ಸ್ನಾತಕೋತ್ತರ ಪದವಿ ಓದಿದ್ದು ಶಿವಬಸಮ್ಮ ಮಾತ್ರ. ಪದವಿ ಹಂತದಲ್ಲಿ ಇವರ ಸಂಕಷ್ಟದಲ್ಲಿಯೂ ಆಸಕ್ತಿಯಿಂದ ಓದುತ್ತಿರುವ ಈಕೆ ಪ್ರಾಧ್ಯಾಪಕರ ನೆಚ್ಚಿನ ಶಿಷ್ಯೆಯಾಗಿದ್ದು, ಸ್ನಾತಕೋತ್ತರ ಪದವಿಗೆ ಸೇರಿದ ಬಳಿಕ ಓದಿನಲ್ಲಿ ಹೆಚ್ಚಾಗಿ ತೊಡಗಿಸಿಕೊಂಡಳು. ಎರಡು ವರ್ಷ ಹಾಸ್ಟೆಲ್‌ನಲ್ಲಿ ಇದ್ದು ಓದಿ, ಇದೀಗ ಎಂಟು ಪದಕಗಳನ್ನು ಪಡೆದಿದ್ದಾರೆ. ಮುಂದೆ ಸಂಶೋಧನೆಯಲ್ಲಿ ಮಾಡಿ ಬಳಿಕ ಬೋಧನೆಯಲ್ಲಿ ತೊಡಗಿಸಿಕೊಂಡು ತನ್ನಂತೆಯೇ ಗ್ರಾಮೀಣ ಪ್ರದೇಶದಿಂದ ಬಂದಿರುವ ವಿದ್ಯಾರ್ಥಿಗಳಿಗೆ ಉತ್ತಮ ಮಾರ್ಗದರ್ಶನ ಮಾಡಬೇಕು ಎಂಬುದು ನನ್ನ ಆಶಯ ಹೊಂದಿದ್ದಾಳೆ.



ಅಂದೇ ನಿಶ್ಚಯಿಸಿಬಿಟ್ಟರು, ಮುಂದೆ ಇನ್ನಾರಿಗೂ ಈ ಸಮಸ್ಯೆಯಾಗಬಾರದು ಎಂದು. ಇದೀಗ ಅವರು ರಸ್ತೆಯಲ್ಲಿನ ನರಕ ಸಮಾನ ಗುಂಡಿಗಳನ್ನು ತಮ್ಮ ಸ್ವಂತ ಖರ್ಚಿನಿಂದ ಮುಚ್ಚಿ ಸರಿಪಡಿಸುತ್ತಿದ್ದಾರೆ. ಒಂದು ತಿಂಗಳಿನಲ್ಲಿ 12 ಗುಂಡಿಗಳನ್ನು ಮುಚ್ಚಿದ ಹೆಗ್ಗಳಿಕೆ ಇವರದ್ದು. ಕಷ್ಟದಲ್ಲಿ ಬದುಕನ್ನು ನಡೆಸುತ್ತಿರುವ ದಾದಾರಾವ್ ಅವರ ಈ ಸಮಾಜಮುಖಿ ಕೆಲಸಕ್ಕೆ ಕೈಜೋಡಿಸುವ ಸಲುವಾಗಿ ಸ್ನೇಹಿತರು, ಹಿತೈಷಿಗಳು ದಾದಾರಾವ್‌ರ ಸಹಾಯಕ್ಕೆ ನಿಲ್ಲುತ್ತಿದ್ದಾರೆ. ಸಮಸ್ಯೆಗಳಿಗೆಲ್ಲ ಸರ್ಕಾರವೇ ಪರಿಹಾರ ಕೊಡಬೇಕು ಎನ್ನುವವರ ಮಧ್ಯೆ ದಾದಾರಾವ್ ಭಿನ್ನವಾಗಿ ಆದರ್ಶರಾಗಿ ಕಾಣುತ್ತಾರೆ.

**ವಿದೇಶದಿಂದ ಭಾರತಕ್ಕೆ ಸಾಕಷ್ಟು ಕಾರಣಕ್ಕೆ ಜನರು ಭೇಟಿ ನೀಡುತ್ತಾರೆ. ವ್ಯಾಪಾರ, ಪ್ರವಾಸ, ಚಿಂತನೆ, ಧಾರ್ಮಿಕ ಶ್ರದ್ಧೆ ಇತ್ಯಾದಿ. ಆದರೆ ಇಸ್ರೇಲ್ ದೇಶದಿಂದ ಅವಿರಾಮ್ ರೋಜಿನ್ ಭಾರತಕ್ಕೆ ಬಂದದ್ದು ಬೇರೆಯೇ ಕಾರಣಕ್ಕೆ. ಇಲ್ಲೊಂದು ಕಾಡನ್ನು ಬೆಳೆಸಲು. ಹಿಂದೊಮ್ಮೆ ಭಾರತಕ್ಕೆ ಭೇಟಿ ನೀಡಿದ್ದ ಅವಿರಾಮ್, ಕೇರಳದ ಹಚ್ಚ ಹಸುರನ್ನೂ, ಚೆನ್ನೈನ ಕಾಂಕ್ರೀಟ್ ಕಾಡನ್ನು ನೋಡಿ ಈ ವ್ಯತ್ಯಾಸವನ್ನು ಸರಿಪಡಿಸಲು ಏನಾದರೂ ಮಾಡಬೇಕೆಂದು ತಾನು ಇಸ್ರೇಲ್‌ನಲ್ಲಿ ದುಡಿದಿಟ್ಟಿದ್ದ ಹಣವನ್ನು ಭಾರತಕ್ಕೆ ತಂದು ಇಲ್ಲಿ ಒಂದಷ್ಟುಜಾಗವನ್ನು ಖರೀದಿಸಿ ಮರಗಿಡಗಳನ್ನು ಬೆಳೆಸಿದ್ದಾರೆ. ಶಿಬಿರಗಳನ್ನು ನಡೆಸಿ ಪರ್ಯಾವರಣ, ಸೋಲಾರ್ ಬಳಕೆ, ಎಲ್.ಇ.ಡಿ ದೀಪಗಳ ಬಳಕೆ ಮುಂತಾದ ವಿಷಯಗಳ ಕುರಿತು ಮಾರ್ಗದರ್ಶನ ಮಾಡುತ್ತಿದ್ದಾರೆ.**



ಹಿಂದಿ ಚಿತ್ರರಂಗದ (ಬಾಲಿವುಡ್‌ನ) ಹಿರಿಯ ನಟ 78 ವರ್ಷದ ಮನೋಜಕುಮಾರ್ ಅವರನ್ನು ದಾದಾ ಸಾಹೇಬ್ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ. ಮನೋಜ್ ಕುಮಾರ್ ಅವರು ಭಾರತೀಯ ಸಿನಿಮಾ ಕ್ಷೇತ್ರದಲ್ಲಿ ಅತೀ ಶ್ರೇಷ್ಠ ಪ್ರಶಸ್ತಿಗಳಲ್ಲೊಂದಾದ 'ದಾದಾ ಸಾಹೇಬ್ ಫಾಲ್ಕೆ ಗೌರವ ಪಡೆಯುತ್ತಿರುವ 47ನೇ ಚಿತ್ರ ಸಾಧಕರಾಗಿದ್ದಾರೆ. ಹಲವಾರು ದೇಶಭಕ್ತಿ ಪ್ರಧಾನ ಚಿತ್ರಗಳಲ್ಲಿ ನಟಿಸಿದಕ್ಕಾಗಿ ಅವರನ್ನು 'ಭಾರತ್ ಕುಮಾರ್' ಎಂಬ ಹೆಸರಿನಿಂದ ಕರೆಯಲಾಗುತಿತ್ತು. 'ಉಪಕಾರ್' ಸಿನಿಮಾಕ್ಕಾಗಿ ಮನೋಜ್‌ಕುಮಾರ್ ಅವರಿಗೆ ರಾಷ್ಟ್ರೀಯ ಪುರಸ್ಕಾರ ದೊರಕಿತ್ತು. ಹಾಗೂ 1992ರಲ್ಲಿ ಭಾರತ ಸರಕಾರ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿತ್ತು. ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿಯು 10 ಲಕ್ಷ ನಗದು, ಸ್ವರ್ಣ ಕಮಲ ಪದಕವನ್ನು ಒಳಗೊಂಡಿರಲಿದೆ.

## ಗುರುತ್ವ ಅಲೆ ಗುರುತಿಸಿದ ಕನ್ನಡಿಗ ವಿಜ್ಞಾನಿ ವಿಶ್ವೇಶ್ವರ


ಗುರುತ್ವ ಅಲೆಗಳ ಪತ್ತೆ ವಿಶ್ವದ ವಿಜ್ಞಾನ ಜಗತ್ತಿನಲ್ಲಿ ದೊಡ್ಡ ಸಂಭ್ರಮ ಮತ್ತು ಸಂಚಲನವನ್ನೇ ಸೃಷ್ಟಿಸಿದೆ. ಈ ಸಾಧನೆ ವಿಜ್ಞಾನದ ಇತಿಹಾಸದಲ್ಲೇ ದೊಡ್ಡ ಮೈಲಿಗಲ್ಲು. ಭಾರತೀಯರು, ಅದರಲ್ಲೂ ಕನ್ನಡಿಗರು ಹೆಮ್ಮೆ ಪಡಬಹುದಾದ ಮಹತ್ವ ಸಂಗತಿ ಈ ಸಂದರ್ಭದಲ್ಲಿದೆ . ಅದೇನೆಂದರೆ, ಲೈಗೊ ವಿಜ್ಞಾನಿಗಳು ಗುರುತ್ವ ಅಲೆಯ ಜತೆಗೆ 'ಭಾಗಶಃ ಸಮ ಸ್ಥಿತಿ'ಯನ್ನೂ (ಕ್ವಾಸಿ- ನಾರ್ಮಲ್ ಮೋಡ್) ಗುರುತಿಸಿರುವುದು. ಗುರುತ್ವದ ಅಲೆಯ ಭವಿಷ್ಯ ನುಡಿದ ಕೀರ್ತಿ ಐನ್‌ಸ್ಟೈನ್‌ಗೆ ಸಂದರೆ, ಕಪ್ಪುರಂಧ್ರಗಳ ಭಾಗಶಃ ಸಮಸ್ಥಿತಿಯ (ಕ್ವಾಸಿ- ನಾರ್ಮಲ್ ಮೋಡ್) ಇರುವಿಕೆ ಪ್ರತಿಪಾದಿಸಿದ ಹಗ್ಗಳಿಕೆ ಕನ್ನಡಿಗ ವಿಜ್ಞಾನಿ ಪ್ರೊ. ಸಿ.ವಿ. ವಿಶ್ವೇಶ್ವರ ಅವರದ್ದು. ಕಪ್ಪುರಂಧ್ರಗಳು ಸೃಷ್ಟಿಯಾದ ಬಳಿಕ ಅವು ತಮ್ಮ ಸ್ಥಿರತೆ ಕಾಯ್ದುಕೊಳ್ಳುತ್ತವೆ ಮತ್ತು ನಿಸರ್ಗದಲ್ಲಿ ಸದಾ ಅಸ್ತಿತ್ವದಲ್ಲಿ ಇರುತ್ತವೆ. ಅಲ್ಲದೆ, ಭಾಗಶಃ ಸಮಸ್ಥಿತಿ ಹೊಂದಿರುತ್ತವೆ ಎಂದು 45 ವರ್ಷಗಳ ಹಿಂದೆಯೇ ನುಡಿದಿದ್ದರು. ಅದೀಗ ಪುರಾವೆ ಸಮೇತ ನಿಜವಾಗಿದೆ.

ಗುರುತ್ವ ಅಲೆಯನ್ನು ಪತ್ತೆ ಮಾಡಿದ್ದನ್ನು ಖಚಿತಪಡಿಸಿ ಆ ಸಂಬಂಧ ಸಂಶೋಧನಾ ಮಾಹಿತಿಯನ್ನು ಸುದ್ದಿಗೋಷ್ಠಿಯಲ್ಲಿ ಪ್ರಕಟಿಸಿದಾಗ ಹೊಸದಾಗಿ ಸೃಷ್ಟಿಯಾದ ಕಪ್ಪುಕುಳಿಯಿಂದ ಉಗಮಿಸಿದ ಭಾಗಶಃ ಸಮಸ್ಥಿತಿಯನ್ನು (ಕ್ವಾಸಿ ನಾರ್ಮಲ್ ಮೋಡ್) ಪತ್ತೆ ಮಾಡಿದ್ದನ್ನೂ ಉಲ್ಲೇಖಿಸಲಾಯಿತು. 1970ರ ಸುಮಾರಿಗೇ ಈ ವಿಷಯವನ್ನು ಪ್ರತಿಪಾದಿಸಿ, 'ನೇಚರ್' ಪತ್ರಿಕೆಯಲ್ಲಿ ಲೇಖನ ಬರೆದಿದ್ದ ಪ್ರೊ. ವಿಶ್ವೇಶ್ವರ ಅವರಿಗೆ ಇದರ ಸಂಪೂರ್ಣ ಕೀರ್ತಿ ಸಲ್ಲುತ್ತದೆ.

पुंगव PUNGAVA
# 74, Ranga Rao Road,
Shankarapuram, Bangalore - 560 004.
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10/25 of every Month REG.NO.CPMG/KA/BGS/102/2015-17
15-3-2016





# ಹಿಂದುಳಿದ ವರ್ಗದ ಭಕ್ತನಿಗೆ ಶ್ರೀಗಳಿಂದ ಸನ್ಯಾಸ ದೀಕ್ಷೆ

ಕಾರ್ಕಳ ಮೂಲದ ದೇವಾಡಿಗ ಸಮುದಾಯದ ಹಿಂದುಳಿದ ವರ್ಗದ ಭಕ್ತರೊಬ್ಬರಿಗೆ ಸಂನ್ಯಾಸ ದೀಕ್ಷೆ ನೀಡಲು ಉಡುಪಿಯ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಸ್ವಾಮೀಜಿ ಅವರು ನಿರ್ಧರಿಸಿದ್ದಾರೆ. ಐದಾರು ವರ್ಷದಿಂದ ಮಠ ಹಾಗೂ ಸ್ವಾಮೀಜಿ ಅವರೊಂದಿಗೆ ಸಂಪರ್ಕದಲ್ಲಿರುವ 26 ವರ್ಷದ ಯುವಕ ಪೇಜಾವರ ಶ್ರೀಗಳಿಂದ ಸನ್ಯಾಸ ದೀಕ್ಷೆ ಸ್ವೀಕರಿಸಲಿದ್ದಾರೆ. 'ಮದ್ಯ ಮತ್ತು ಮಾಂಸ ತ್ಯಜಿಸಲು ಸಿದ್ಧರಿರುವವರಿಗೆ ಮಂತ್ರ ದೀಕ್ಷೆ ನೀಡಲಿದ್ದು, ಭಕ್ತಿ ದೀಕ್ಷೆಯನ್ನು ಜಾತ್ಯತೀತವಾಗಿ ಎಲ್ಲರಿಗೂ ನೀಡಲು ಸಿದ್ಧ' ಎಂದು ಪೇಜಾವರ ಶ್ರೀಗಳು ತಿಳಿಸಿದರು.




ಶ್ರೀ ರಾಮಸ್ಯ ಜನ್ಮಸ್ಥಾನಂ ಅಯೋಧ್ಯಾ, ಕೋಟ್ಯಂತರಹಿಂದೂಬಾಂಧವೇಭ್ಯಃ ಧಾರ್ಮಿಕಂ ಶ್ರದ್ಧಾಕೇಂದ್ರಮ್. ಕಿಂತು ಹೈಂದವಾನಾಂ ಇಮಂ ಕ್ಷೇತ್ರಂ ಪ್ರತಿ ಪ್ರತಿವರ್ಷಂ 60 ಲಕ್ಷಪರಿಮಿತಂ ಜನಾಃ ಆಗಚ್ಛಂತಿ ಇತಿ ವಿಶೇಷಃ.

ತೇಷಾಂ ರಾಜ್ಞೀ ಹುರ್ ಹವಾಂಗ್ ಓಕೆ ಇತ್ಯೇಭ್ಯಃ ಗೌರವಂ ಸಮರ್ಪಿತುಂ ತೇ ಅತ್ರ ಆಗಚ್ಛಂತಿ.

ಇತಿಹಾಸಾನುಸಾರೇಣ ಹುರ್ ಹವಾಂಗ್ ಇತ್ಯೇಷಾ ಅಯೋಧ್ಯಾಯಾಂ ವಿದ್ಯಮಾನಾ ಸುರಿರತ್ನಾ ಇತಿ ರಾಜ್ಞೀ ಆಸೀದಿತಿ. ಏಷಾ ಕೊರಿಯಾಂ ಪ್ರಾಪ್ಯ ತತ್ರತ್ಯ ಕರರ್ ಇತಿ ಕುಟುಂಬಸ್ಯ ಕಿಂ ಸುರೋ ಇತಿ ರಾಜ್ಞಾ ಸಹ ವಿವಾಹಂ ಕೃತವತೀ.

ತೇಷಾಂ ಉತ್ತಮರಾಜ್ಞೀಂ ಪ್ರತಿ ಗೌರವಂ ಸಮರ್ಪಯಿತುಂ ಪ್ರತಿವರ್ಷಂ 60 ಲಕ್ಷಪರಿಮಿತಂ ಜನಾಃ ಅಯೋಧ್ಯಾಂ ಆಗಚ್ಛಂತಿ.

ಸದ್ಯಃ ಯದಾ ನರೇಂದ್ರ ಮೋದಿ ಮಹೋದಯಃ ದಕ್ಷಿಣಕೊರಿಯಾ ದೇಶಂ ಗತವಾನ್ ತದಾ ಉಭಯದೇಶೀಯಾಃ ಅಪಿ ತಸ್ಯಾಃ ಸ್ಮಾರಕಮೇಕಂ ಅಯೋಧ್ಯಾಯಾಂ ನಿರ್ಮಿತುಂ ನಿರ್ಧಾರಂ ಕೃತವಂತಃ. ಅತಃ ಸದ್ಯಃ ಕೊರಿಯಾತಃ ಆಗತಃ ನಿಯೋಗಃ ಉತ್ತರಪ್ರದೇಶಸ್ಯ ಮುಖ್ಯಮಂತ್ರಿಣಾ ಅಖಿಲೇಶ್ ಯಾದವ್ ಮಹೋದಯೇನ ಸಹ ವಾರ್ತಾಮಪಿ ಕೃತವಾನ್.

## ಪುಂಗವ ಪತ್ರಿಕೆಯ ಪ್ರಾರೂಪ

(ಪ್ರಾರೂಪ–8, ವಿಧಿ–8)

| | |
|---|---|
| ಪ್ರಕಟಣೆಯ ಸ್ಥಳ | : #74, ರಂಗರಾವ್ ರಸ್ತೆ, ಬೆಂಗಳೂರು – 560 004 |
| ಪ್ರಕಾಶಕ | : ಕಾ.ಶ್ರೀ. ನಾಗರಾಜ, #74, ರಂಗರಾವ್ ರಸ್ತೆ, ಬೆಂಗಳೂರು – 560 004 |
| ಸಂಪಾದಕ | : ಕಾ.ಶ್ರೀ. ನಾಗರಾಜ, #74, ರಂಗರಾವ್ ರಸ್ತೆ, ಬೆಂಗಳೂರು – 560 004 |
| ಭಾರತದ ಪ್ರಜೆಯೇ | : ಹೌದು |
| ಮುದ್ರಕ | : ರಾಷ್ಟ್ರೋತ್ಥಾನ ಮುದ್ರಣಾಲಯ, ಕೆಂಪೇಗೌಡನಗರ, ಬೆಂಗಳೂರು – 560 019 |

ಮೇಲೆ ಹೇಳಿರುವ ಎಲ್ಲ ಮಾಹಿತಿಗಳೂ ಪೂರ್ಣ ಸತ್ಯವೆಂದು ನಾನು ಕಾ.ಶ್ರೀ. ನಾಗರಾಜ (#74, ರಂಗರಾವ್ ರಸ್ತೆ, ಬೆಂಗಳೂರು – 560 004) ಘೋಷಿಸುತ್ತೇನೆ.

ಬೆಂಗಳೂರು
10–3–2016

ಸಹಿ/–
**ಕಾ.ಶ್ರೀ. ನಾಗರಾಜ**
(ಸಂಪಾದಕ – ಪ್ರಕಾಶಕ)

# ಅನಾಥ ಗೋವುಗಳ ರಕ್ಷಕ ಪುಣ್ಯಕೋಟಿ ನಾಗರಾಜ್



ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲೂಕಿನ ಬುಕ್ಲಾಪುರ–ಹೊರಬೈಲು ಗ್ರಾಮದ ಪುಣ್ಯಕೋಟಿ ನಾಗರಾಜ–ನಿರ್ಮಲಾ ದಂಪತಿಗಳು ತಮ್ಮ ಬದುಕಿನ ಅವಿಭಾಜ್ಯ ಅಂಗವೆಂಬಂತೆ ಗೋವುಗಳ ರಕ್ಷಣೆಯಲ್ಲಿ ತೊಡಗಿದ್ದಾರೆ.

ತಮ್ಮ ಮನೆಗೆ ಹೊಂದಿಕೊಂಡಂತೆ 'ಪುಣ್ಯಕೋಟಿ' ಹೆಸರಿನ ಗೋಶಾಲೆ ನಿರ್ಮಿಸಿದ್ದಾರೆ. ಕಟುಕರಿಂದ ರಕ್ಷಿಸಿರುವ ಮತ್ತು ಪೆಟ್ಟಾಗಿ ಬೀದಿಪಾಲಾಗುವ ಹತ್ತಾರು ಜಾನುವಾರುಗಳು ಈ ಗೋಶಾಲೆಯಲ್ಲಿ ಆಶ್ರಯ ಪಡೆದಿವೆ. ಇವುಗಳ ಆರೈಕೆಯಲ್ಲಿ ನಾಗರಾಜ್ ದಂಪತಿ ತೃಪ್ತಿ ಕಂಡುಕೊಂಡಿದ್ದಾರೆ.

ಈ ಕುಟುಂಬ ಆರ್ಥಿಕವಾಗೇನೂ ಸ್ಥಿತಿವಂತ ಅಲ್ಲ. ಕುಟುಂಬದ ನಿರ್ವಹಣೆಗಾಗಿ ಗೂಡ್ಸ್ ಆಟೋ ಓಡಿಸುವ ನಾಗರಾಜ್, ಆ ವಾಹನಕ್ಕೆ ಪುಣ್ಯಕೋಟಿ ಎಂದೇ ಹೆಸರಿಟ್ಟಿದ್ದಾರೆ. ಜಾನುವಾರುಗಳು ಯಾವುದೇ ರೀತಿಯ ಸಂಕಷ್ಟಕ್ಕೊಳಗಾದಾಗ ಅವುಗಳ ಸೇವೆಗೆ ಧಾವಿಸುತ್ತಾರೆ. ಗೋ ಸೇವೆಯಲ್ಲಿ ತಲ್ಲೀನರಾಗುತ್ತಾರೆ. ಆಸುಪಾಸಿನಲ್ಲಿ ಮೃತಪಟ್ಟ ಜಾನುವಾರುಗಳನ್ನು ತಮ್ಮ ವಾಹನದಲ್ಲಿ ಸಾಗಿಸಿ ಅಂತ್ಯಸಂಸ್ಕಾರಕ್ಕೂ ಸಹಕರಿಸುತ್ತಾರೆ. ಯಾರದ್ದೇ ಮನೆಯಲ್ಲಿ ಜಾನುವಾರುಗಳಿಗೆ ಆರೋಗ್ಯ ಸಮಸ್ಯೆ ಕಾಣಿಸಿಕೊಂಡರೂ ಅವುಗಳನ್ನು ಆಸ್ಪತ್ರೆಗೆ ಕರೆದೊಯ್ಯಲು ಉಚಿತ ಸೇವೆ ನೀಡುತ್ತಾರೆ. ಬೀಡಾಡಿ ಜಾನುವಾರು ಸಂಕಷ್ಟಕ್ಕೀಡಾದರೆ ಜನ ಮೊದಲು ಕರೆಯುವುದು ನಾಗರಾಜ್ ಅವರನ್ನೇ.

**18 ಬಗೆಯ ತಳಿಗಳು :** ಕಟುಕರಿಂದ ರಕ್ಷಿಸಿದ ಹೋರಿಗಳಲ್ಲದೆ ಗೋಶಾಲೆಯಲ್ಲಿ ಗೀರ್, ಅಮೃತಮಹಲ್, ಹಳ್ಳಿಕಾರ್, ಲಾಲ್ಕಂದರಿ, ಮಲೆನಾಡು ಗಿಡ್ಡ ಸೇರಿ ಸುಮಾರು 18 ಗೋವಿನ ತಳಿಗಳಿವೆ. ನಾಗರಾಜ್ ಅವರು ಕುರುವಳ್ಳಿ ಗ್ರಾಮ ಪಂಚಾಯಿತಿ ಸದಸ್ಯರಾಗಿದ್ದ ವೇಳೆ ದೊರೆಯುತ್ತಿದ್ದ ಗೌರವಧನವನ್ನು ಸ್ವಂತಕ್ಕೆ ಬಳಸಿಕೊಳ್ಳದೆ ಆ ಹಣದಿಂದ ಹುಲ್ಲು ಖರೀದಿಸಿ ಹೊಸನಗರ ರಾಮಚಂದ್ರಾಪುರ ಮಠದ ಗೋಶಾಲೆಗೆ ಕಳಿಸುತ್ತಿದ್ದರು.

**ನೋವಿನಲ್ಲೂ ನಲಿವು:** ನಾಗರಾಜ್–ನಿರ್ಮಲಾ ದಂಪತಿಗೆ ಇಬ್ಬರು ಗಂಡುಮಕ್ಕಳಿದ್ದು ಕಿರಿಯ ಮಗ ಪೋಲಿಯೋಪೀಡಿತ ಹಾಗೂ ಬುದ್ಧಿಮಾಂದ್ಯ. ಒಡಲಾಳದ ನೋವು ಹಾಗೂ ಆರ್ಥಿಕ ಸಂಕಷ್ಟದ ನಡುವೆಯೂ ಇವರು ಗೋಶಾಲೆ ನಡೆಸುತ್ತಿದ್ದಾರೆ. ಈಗಿನ ಆರ್ಥಿಕ ಪರಿಸ್ಥಿತಿಯಲ್ಲಿ ಜಾನುವಾರುಗಳಿಗೆ ಮೇವು ಮತ್ತಿತರ ಆಹಾರ ಒದಗಿಸುವುದು ಬಲು ಕಷ್ಟ. ಅಂಥದ್ದರಲ್ಲಿ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಸ್ವಂತ ಖರ್ಚಿನಲ್ಲಿ ಇವರು ಬೀಡಾಡಿ ದನಗಳ ಆರೈಕೆ ಮಾಡಿ ಸಾರ್ಥಕ್ಯ ಕಾಣುತ್ತಿದ್ದಾರೆ.

**ಗ್ರಾಮದಲ್ಲಿ ನೀರಿನ ತೊಟ್ಟಿ :** ಈ ವರ್ಷ ಗೋಪೂಜೆ ನೆನಪಿಗಾಗಿ ಗ್ರಾಮದ ಅಲ್ಲಲ್ಲಿ ಜಾನುವಾರುಗಳಿಗೆ ಕುಡಿಯುವ ನೀರಿಗಾಗಿ ಸಿಮೆಂಟ್ ತೊಟ್ಟಿಗಳನ್ನು ನಿರ್ಮಿಸಿದ್ದಾರೆ. ತಮ್ಮ ತಮ್ಮ ಮನೆಗಳ ಸಮೀಪ ಇಟ್ಟಿರುವ ಈ ತೊಟ್ಟಿಗಳಿಗೆ ಜನರು ನೀರು ತುಂಬಿಸಿ ಪ್ರಾಣಿ, ಪಕ್ಷಿಗಳ ನೀರಿನ ದಾಹ ತೀರಿಸುವಂತೆ ಮನವಿ ಮಾಡಿದ್ದಾರೆ. ಇವರಿಂದ ಪ್ರೇರಿತರಾದ ಹಲವರು ನೀರು ತುಂಬಿಸಿ ಜಾನುವಾರುಗಳ ನೀರಡಿಕೆ ದೂರವಾಗಿಸುತ್ತಿದ್ದಾರೆ.

# ಮೊಬೈಲ್ ಕಳೆದು ಹೋಗಿದೆಯೇ?




ಯಾವತ್ತೂ ನಮ್ಮ ಜೊತೆಯಲ್ಲಿಯೇ ಇರಬೇಕಾದ ಮೊಬೈಲ್ ಫೋನ್ ಕಳೆದು ಹೋಗದಂತೆ ಅಥವಾ ಕಳವಾಗದಂತೆ ಎಚ್ಚರ ವಹಿಸುವುದು ಸ್ವಲ್ಪ ಕಷ್ಟವೇ. ಅದನ್ನು ಸುರಕ್ಷಿತವಾಗಿಡಲು ಕೆಲವು ಸಲಹೆಗಳು ಇಲ್ಲಿವೆ:

**ಐಎಂಇಐ:** ಪ್ರತಿ ಮೊಬೈಲ್‌ಗೂ ಒಂದೊಂದು ಐಎಂಇಐ (International Mobile Station Equipment Identity) ಸಂಖ್ಯೆ ಇರುತ್ತದೆ. ನಿಮ್ಮ ಮೊಬೈಲ್‌ನಿಂದ *#06# ಅಂಕಿಯನ್ನು ಡಯಲ್ ಮಾಡಿದಾಗ ನಿಮ್ಮ ಮೊಬೈಲ್‌ನ IMEI ನಂಬರ್ ಸ್ಕ್ರೀನ್‌ನಲ್ಲಿ ಬರುತ್ತದೆ. ಇದನ್ನು ನೀವು ಜೋಪಾನವಾಗಿ ಒಂದು ಕಡೆ ಬರೆದಿಟ್ಟುಕೊಳ್ಳಿ. ಒಂದು ವೇಳೆ ನಿಮ್ಮ ಹ್ಯಾಂಡ್‌ಸೆಟ್ ಕಳವಾದಾಗ ಪೊಲೀಸರಲ್ಲಿ ಎಫ್‌ಐಆರ್ ದಾಖಲಿಸುವ ಸಂದರ್ಭದಲ್ಲಿ IMEI ನಂಬರನ್ನು ಅರ್ಜಿಯಲ್ಲಿ ದಾಖಲಿಸಿ. ಆವಾಗ ನಿಮ್ಮ ಹ್ಯಾಂಡ್‌ಸೆಟ್‌ನ್ನು ಪೊಲೀಸರಿಗೆ ಬ್ಲಾಕ್ ಮಾಡಲು ಸಾಧ್ಯವಾಗುತ್ತದೆ. ಅಥವಾ ನಿಮ್ಮ ಮೊಬೈಲ್‌ನಲ್ಲಿ ಬೇರೆಯವರು ಸಿಮ್ ಕಾರ್ಡ್ ಹಾಕಿ ಬಳಸುತ್ತಿದ್ದರೂ IMEI ಮುಖಾಂತರ ಅವರ ಮೊಬೈಲ್ ನಂಬರ್ ಪತ್ತೆಹಚ್ಚಲು ಸಾಧ್ಯವಾಗುತ್ತದೆ.

**ಗೂಗಲ್ ಡಿವೈಸ್ ಮ್ಯಾನೇಜರ್:** ಆಂಡ್ರಾಯ್ಡ್ ಮೊಬೈಲಿನ್ ಆ್ಯಪ್‌ಗಳ ಪಟ್ಟಿಯಲ್ಲಿ (ಮೆನು) 'ಗೂಗಲ್ ಸೆಟ್ಟಿಂಗ್ಸ್' ಎಂಬ ಐಕಾನ್ ಹುಡುಕಿ, ಕ್ಲಿಕ್ ಮಾಡಿ. ಅಲ್ಲಿ Android Device Manager ಒತ್ತಿದ ಬಳಿಕ Remotely Locate this device ಹಾಗೂ Allow Remote lock and factory reset ಎಂಬ ಎರಡು ಚೆಕ್ ಬಾಕ್ಸ್‌ಗಳ ಮೇಲೆ ಸರಿ ಚಿಹ್ನೆ (right mark) ಒತ್ತಿಬಿಡಿ.

ಇನ್ನು ನೀವು ಆಕಸ್ಮಿಕವಾಗಿ ಫೋನನ್ನು ಎಲ್ಲೋ ಮರೆತುಬಿಟ್ಟಿರಿ ಅಥವಾ ಅದು ಕಳೆದುಹೋಯಿತು ಎಂದಾದರೆ, ಇಂಟರ್ನೆಟ್ ಸಂಪರ್ಕವಿರುವ ಕಂಪ್ಯೂಟರಿನಲ್ಲಿ ಗೂಗಲ್‌ನ ಡಿವೈಸ್ ಮ್ಯಾನೇಜರ್ (https://android.com/devicemanager) ತಾಣಕ್ಕೆ ಹೋಗಿ, ಅಲ್ಲಿ ನಿಮ್ಮ ಮೊಬೈಲಿನಲ್ಲಿ ಬಳಸಿರುವ ಗೂಗಲ್ ಐಡಿ ಬಳಸಿ ಲಾಗಿನ್ ಆಗಿ. ನಿಮಗೆ ನಕ್ಷೆ ಇರುವ ಒಂದು ಪುಟ್ಟ ವಿಂಡೋ ಕಾಣಿಸುತ್ತದೆ. ಅದರಲ್ಲಿ ಫೋನನ್ನು ಜೋರಾಗಿ ರಿಂಗ್ ಮಾಡುವ, ಫೋನನ್ನು ಲಾಕ್ ಮಾಡಿಬಿಡುವ, ಅದರಲ್ಲಿರುವ ಡೇಟ ಅಳಿಸಿಬಿಡುವ ಬಟನ್‌ಗಳಿರುತ್ತವೆ. ನಿಮ್ಮ ಸಾಧನ ಎಲ್ಲಿದೆ ಅಂತ ಗೂಗಲ್ ಮ್ಯಾಪ್ಸ್‌ನಲ್ಲಿ ಅಂದಾಜು ಸ್ಥಳವನ್ನೂ ತೋರಿಸಲಾಗುತ್ತದೆ ಹಾಗೂ ಯಾವಾಗ ಕೊನೆಯ ಬಾರಿಗೆ ಅದನ್ನು ಬಳಸಲಾಗಿದೆ, ಇಲ್ಲವೇ ಕೊನೆಯ ಬಾರಿ ಇಂಟರ್ನೆಟ್‌ಗೆ/ಜಿಪಿಎಸ್ ವ್ಯವಸ್ಥೆಗೆ ಸಂಪರ್ಕಿಸಿದೆ ಎಂಬ ದಿನಾಂಕವೂ ಕಾಣಿಸುತ್ತದೆ.

ನಿಮ್ಮ ಮೊಬೈಲ್ ಸೈಲೆಂಟ್ ಆಗಿದ್ದರೂ ಈ ವಿಧಾನದ ಮೂಲಕ ಅದನ್ನು ರಿಂಗ್ ಮಾಡಬಹುದು.

ಇದೇ ರೀತಿ ಐಫೋನಿನಲ್ಲಿ Find My iPhone ಎಂಬ ವ್ಯವಸ್ಥೆಯಿದೆ. ಅದನ್ನು ಐ ಕ್ಲೌಡ್ ಸೆಟ್ಟಿಂಗ್ ಬಳಸಿ ಎನೇಬಲ್ ಮಾಡಿರಬೇಕು.

ಇದರ ಜೊತೆಗೆ, ಕಳುವಾದ ತಕ್ಷಣ ನಿಮ್ಮ ಮೊಬೈಲ್ ಆಪರೇಟರ್‌ಗೆ ಮಾಹಿತಿ ನೀಡುವುದು ಮುಖ್ಯ. ನಿಮ್ಮ ಸಿಮ್ ಕಾರ್ಡ್ ಬ್ಲಾಕ್ ಮಾಡುವ ಮೂಲಕ ಅದರ ದುರುಪಯೋಗವನ್ನು ತಡೆಯಬಹುದು.